# ಅನಂತಪಥ

ANANTHKUMAR PRATISHTHANA

ರಾಷ್ಟ್ರನಿಷ್ಠೆಯ ಸಾಕಾರರೂಪ ಅನಂತಕುಮಾರ್



ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-2

ಪಿ.ವಿ. ಕೃಷ್ಣಭಟ್ಟ

ಸಂಪುಟ - 2 ಜುಲೈ- 2021 ಸಂಚಿಕೆ - 1

## ಸಂಸದರ ಗ್ರಾಮಾಭಿವೃದ್ಧಿ ಯೋಜನೆ – ರಾಗಿಹಳ್ಳಿಯ ಪ್ರಯೋಗ



ಭಾರತವು ಹಳ್ಳಿಗಳ ದೇಶ. ಹಳ್ಳಿಗಳ ಅಭಿವೃದ್ಧಿಯಾಗುವವರೆಗೆ ಸಮಗ್ರ ಭಾರತವು ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ಸೇರುವುದು ಕನಸಾಗಿಯೇ ಉಳಿಯುತ್ತದೆ. ದೇಶವು ಸ್ವತಂತ್ರವಾದ ಮೊದಲ **67** ವರ್ಷಗಳಲ್ಲಿ ನಮ್ಮ ಎಲ್ಲ ಅಭಿವೃದ್ಧಿಪರ ಚಟುವಟಿಕೆಗಳು ನಗರಕೇಂದ್ರಿತವೇ ಆಗಿದ್ದವು. ಹಳ್ಳಿಯ ಜನರಿಗೆ ಒಂದಷ್ಟು ಸಹಾಯಧನ (ಸಬ್ಸಿಡಿ) ಮತ್ತು ರಿಯಾಯಿತಿ ನೀಡುವ ಮೂಲಕ ಹಾಗೂ ಆಗೊಮ್ಮೆ ಈಗೊಮ್ಮೆ ಸಾಲಮನ್ನಾ ಮಾಡುವ ಮೂಲಕ ಜನರ ಒಲವನ್ನು ಗಳಿಸುವುದು ಸುಲಭವಾಗಿತ್ತು. ಹಾಗಾಗಿ ಆಳರಸರ ಗಮನ ಹಳ್ಳಿಗಳ ವಿಕಾಸದ ಕಡೆ ಹರಿಯಲೇ ಇಲ್ಲ.

### ಆದರ್ಶ ಗ್ರಾಮ ಯೋಜನೆ

**2014** ರಲ್ಲಿ ಆಮೂಲಾಗ್ರ ಬದಲಾವಣೆಯ ಆದರ್ಶವನ್ನು ಹೊತ್ತ ರಾಷ್ಟ್ರವಾದಿ ಸರಕಾರವು ನರೇಂದ್ರ ಮೋದಿಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಾಗ ಹಳ್ಳಿಗಳನ್ನೇ ಲಕ್ಷ್ಯವಾಗಿರಿಸಿಕೊಂಡ ಅನೇಕ ಯೋಜನೆಗಳನ್ನು ನಿರೂಪಿಸಿತು. ಅವುಗಳಲ್ಲಿ ಪ್ರಮುಖವಾದುದು ಸಂಸದರ ಆದರ್ಶ ಗ್ರಾಮ ಯೋಜನೆ. ಶ್ರೀ ಜಯಪ್ರಕಾಶ ನಾರಾಯಣರ ಜನ್ಮದಿನವಾದ **11/10/2014** ರಂದು ಪ್ರಧಾನ ಮಂತ್ರಿಗಳಾದ ಮಾನ್ಯ ಶ್ರೀ ನರೇಂದ್ರ ಮೋದಿಯವರು ಈ ಯೋಜನೆಯನ್ನು ಅನಾವರಣ ಮಾಡಿದರು. ಈ ಯೋಜನೆಯು ಎಲ್ಲ ಆಯಾಮಗಳಲ್ಲಿಯೂ ಒಂದು ಹಳ್ಳಿಯ ವಿಕಾಸವನ್ನು ಸಾಧಿಸುವ ಮಹತ್ವಾಕಾಂಕ್ಷೆ ಹೊಂದಿದೆ; ಹಳ್ಳಿಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ಹಳ್ಳಿಯ ಸಮಸ್ತರನ್ನೂ ಒಗ್ಗೂಡಿಸಿ ಜನರಲ್ಲಿ ದೇಶಹಿತಕ್ಕಾಗಿ ಕೆಲಸಮಾಡಲು ಪ್ರೇರಣೆ ಮತ್ತು ಉತ್ಸಾಹಗಳನ್ನು ಉಂಟುಮಾಡುವ ಗುರಿ ಹೊಂದಿದೆ. ಜನರ ಅಗತ್ಯಗಳಿಗನುಸಾರವಾಗಿ, ಸಮಾಜದಿಂದ ಪ್ರೇರಿತವಾದ ಅಭಿವೃದ್ಧಿ ಕಾರ್ಯಗಳನ್ನು ಜನರ ಭಾಗವಹಿಸುವಿಕೆಯ ಮೂಲಕವೇ ನಡೆಸುವುದು ಈ ಯೋಜನೆಯ ಪ್ರಮುಖ ವೈಶಿಷ್ಟ್ಯ.

### ರಾಮ ತೀರ್ಥ ಮತ್ತು ಸಂಕೋನಟ್ಟಿ ಅನುಭವ

ಸಂಸದರ ಗ್ರಾಮಾಭಿವೃದ್ಧಿ ಯೋಜನೆಯು ಜಾರಿಗೆ ಬರುವ ಮೊದಲೇ ಅನಂತಕುಮಾರರು ಅದಮ್ಯ ಚೇತನ ಸಂಸ್ಥೆಯ ಸುಭಿಕ್ಷಾ ಗ್ರಾಮ ಯೋಜನೆಯ ಮೂಲಕ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ರಾಮ ತೀರ್ಥ ಮತ್ತು ಸಂಕೋನಟ್ಟಿ ಗ್ರಾಮಗಳನ್ನು ದತ್ತು ತೆಗೆದುಕೊಂಡು ಆ ಎರಡು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗಿದ್ದರು.

**2010** ರ ಮಹಾ ಪ್ರವಾಹದಲ್ಲಿ ತೀವ್ರ ಹಾನಿಗೊಳಗಾಗಿದ್ದ ಈ ಎರಡು ಗ್ರಾಮಗಳ ಅಂತರ್ಜಲ ಮಟ್ಟ ಕುಸಿದು ಕೊಳವೆ ಬಾವಿಗಳೆಲ್ಲ ಬತ್ತಿ ಹೋಗಿದ್ದವು. ಊರಿನ ಪಕ್ಕದಲ್ಲಿಯೇ ಕೇವಲ **20** ವರ್ಷಗಳ ಹಿಂದೆ ನಿರಂತರವಾಗಿ ಹರಿಯುತ್ತಿದ್ದ ಹಳ್ಳವು ಸಂಪೂರ್ಣ ಒಣಗಿ ಹೋಗಿತ್ತು. ಜನರು ಉರುವಲಿಗಾಗಿ ಸೌದೆಯನ್ನು ಬಳಸುತ್ತಿದ್ದರು. ಅದರ ಪರಿಣಾಮವಾಗಿ ಅಕ್ಕ ಪಕ್ಕದ ಬೆಟ್ಟಗುಡ್ಡಗಳು, ಕಣಿವೆಗಳು ಮರಗಿಡಗಳಿಲ್ಲದೆ ಬೋಳಾಗಿದ್ದವು. ಮರಗಿಡಗಳನ್ನು ನಾಶಮಾಡಿದುದರಿಂದ ತೀವ್ರವಾದ ಮಣ್ಣಿನ ಸವಕಳಿಯುಂಟಾಗಿ ಜನರು ಸಾರವತ್ತಾದ ಮೇಲ್ಮಣ್ಣನ್ನು ಬೇರೆ ಕಡೆಯಿಂದ ಖರೀದಿಸಿ ಟ್ರಾಕ್ಟರುಗಳಲ್ಲಿ ಸಾಗಿಸಿ ತಮ್ಮ ಹೊಲಗಳಿಗೆ ಹಾಕುತ್ತಿದ್ದರು. ಇಡೀ ಗ್ರಾಮದಲ್ಲಿ ಶೌಚಾಲಯಗಳಿಲ್ಲದಿದ್ದುದರಿಂದ ಜನರು ಬಯಲನ್ನೇ ಆಶ್ರಯಿಸಿದ್ದರು. ಗ್ರಾಮದಲ್ಲಿ ಶುಚಿತ್ವವೆಂಬ ಹೆಸರೇ ಇರಲಿಲ್ಲ. ಇದರ ಜೊತೆಗೆ ಜನರ ಮುಖ್ಯ ಆದಾಯಮೂಲವಾದ ಹಾಲಿಗೆ ಪ್ರತಿ ಲೀಟರಿಗೆ ಕೇವಲ ಹದಿನಾರು ರೂಪಾಯಿ ದೊರೆಯುತ್ತಿತ್ತು.

ಪುಟ 4 ರಲ್ಲಿ ಮುಂದುವರೆದಿದೆ






ಪಾರಂಪರಿಕ ಜ್ಞಾನದ ಬೆಳಕಿನಲ್ಲಿ ಪರಿಸರದ ರಕ್ಷಣೆ
ಡಾ. ಎ.ಎನ್.ಯಲ್ಲಪ್ಪರೆಡ್ಡಿ
ಪುಟ - 3

ಸುಗಮ ಸಂಚಾರವ್ಯವಸ್ಥೆಗೆ ಮೆಟ್ರೋ ಪರಿಹಾರ
ಗುಡ್ಡು ಶಾಸ್ತ್ರಿ ಇನಾಂದಾರ್
ಪುಟ - 7



ಮಹಿಳಾ ಸಬಲೀಕರಣ
ಅನಘಾ ಲಿಮಯೆ
ಪುಟ - 9





ವಿಮಾನಯಾನದ ಕನಸು - ನನಸು
ಪ್ರದೀಪ್ ಓಕ್
ಪುಟ - 10

# ರಾಷ್ಟ್ರನಿಷ್ಠೆಯ ಸಾಕಾರರೂಪ - ಅನಂತಕುಮಾರ್

ಪ್ರೊ. ಪಿ.ವಿ. ಕೃಷ್ಣಭಟ್ಟ
ಕುಲಾಧಿಪತಿ, ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯ
ಕೋರಾಫಟ್

ನಾನು ಕಂಡಂತೆ



ಅನಂತಕುಮಾರ್

ಅನಂತಕುಮಾರ್ ಅವರೊಂದಿಗೆ ನನ್ನ ಸಂಪರ್ಕ ಉಂಟಾಗಿದ್ದು ೧೯೭೭ರಲ್ಲಿ, ತುರ್ತುಪರಿಸ್ಥಿತಿಯ ಕರಾಳ ಕಾಲಖಂಡ ಕೊನೆಗೊಂಡು ಪ್ರಜಾಪ್ರಭುತ್ವದ ತಿಳಿಗಾಳಿ ಪುನಃ ಬೀರಲಾರಂಭಿಸಿದ್ದಾಗ. ಆಗ ನನಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪ್ರಾಂತ ಸಂಘಟನಾ ಕಾರ್ಯದರ್ಶಿಯಾಗಿ ಜವಾಬ್ದಾರಿ ನೀಡಲಾಗಿತ್ತು. ತುರ್ತು ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಪರಿಷತ್ತಿನ ಹಲವು ಕಾರ್ಯಕರ್ತರು ಮೀಸಾ ಅಥವಾ ಡಿಐಆರ್ ಕಾಯಿದೆಯನ್ವಯ ಬಂಧನಕ್ಕೆ ಒಳಗಾಗಿದ್ದರು. ವಿದ್ಯಾರ್ಥಿ ಪರಿಷತ್ತಿನ ಕಾರ್ಯಾಲಯಗಳಿಗೂ ಬೀಗಮುದ್ರೆ ಹಾಕಲಾಗಿತ್ತು. ನಾನೂ ಸಹ ಮೀಸಾ ಕಾನೂನಿನನ್ವಯ ಬಂದಿಯಾಗಿದ್ದೆ. ಅನಂತಕುಮಾರ್ ಅವರೂ ಹುಬ್ಬಳ್ಳಿಯಲ್ಲಿ ಹೋರಾಟದಲ್ಲಿ ಪಾಲ್ಗೊಂಡು ಡಿಐಆರ್ ಅನ್ವಯ ಸೆರೆಮನೆವಾಸ ಅನುಭವಿಸಿದ್ದರೆಂದು ಕೇಳಿದ್ದೆ.

ತುರ್ತು ಪರಿಸ್ಥಿತಿಯ ಅವಧಿ ಕಳೆದ ನಂತರ ಸಂಘಟನೆಯ ಕೆಲಸ ಪುನಃ ಆರಂಭವಾದಾಗ ಪ್ರಾರಂಭದಲ್ಲಿ ನಾನು ಭೇಟಿ ನೀಡಿದ್ದು ಹುಬ್ಬಳ್ಳಿಗೆ. ತುರ್ತು ಪರಿಸ್ಥಿತಿಗೆ ಮುನ್ನ ಪರಿಷತ್ತಿನ ಕಾರ್ಯಕ್ಕಾಗಿ ಕೆಲವು ಬಾರಿ ಭೇಟಿ ನೀಡಿದ್ದೆ. ಕೆಎಂಎಸ್ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಡಾ. ವಿರಾಗ್ ಗೋಖಲೆ, ಡಾ. ಮಾಧವ ಜಿಗಜಿಣಗಿ ಮುಂತಾದವರು ವಿದ್ಯಾರ್ಥಿ ಪರಿಷತ್ತಿನ ಕಾರ್ಯದ ಬೀಜಾರೋಪಣ ಮಾಡಿದ್ದರು. ತುರ್ತು ಪರಿಸ್ಥಿತಿಯಲ್ಲಿ ಆ ಕೆಲಸ ಬಹುಮಟ್ಟಿಗೆ ನಿಂತು ಹೋಗಿತ್ತು. ಈಗ ತುರ್ತು ಪರಿಸ್ಥಿತಿಯ ನಂತರ ಹೊಸದಾಗಿ ಆರಂಭವಾಗಬೇಕಿತ್ತು. ಮೊಟ್ಟ ಮೊದಲಿಗೆ ನಾನು ಹುಬ್ಬಳ್ಳಿಯಲ್ಲಿ ಹೋಗಿದ್ದು ನೀಲಿಜಿನ್ ರಸ್ತೆಯಲ್ಲಿದ್ದ ಶ್ರೀ ಅಚ್ಯುತ ಲಿಮಯೆ ಅವರ ಮನೆಗೆ. ಅವರ ಜೊತೆಗಾರರಾಗಿದ್ದ ಅನಂತಕುಮಾರ್, ಅನಿಲ ಸಹಸ್ರಬುದ್ಧೆ, ವ್ಯಾಸ ದೇಶಪಾಂಡೆ ಮುಂತಾದ ಯುವಕರ ಸಮೂಹವೇ ಅಂದು ವಿದ್ಯಾರ್ಥಿ ಪರಿಷತ್ತಿನ ಸಂಘಟನೆಯ ಮೊದಲ ತಂಡವಾಗಿತ್ತು ಎನ್ನಬಹುದು. ಎಲ್ಲರೂ ಉತ್ಸಾಹಶಾಲಿಗಳು, ಕ್ರಿಯಾಶೀಲರು. ಅವರ ಆಧಾರದ ಮೇಲೆ ಸಂಘಟನೆ ಕ್ರಮಕ್ರಮವಾಗಿ ಭದ್ರಗೊಳ್ಳುತ್ತ ಸಾಗಿತ್ತು.

ಅನಂತಕುಮಾರ್ ಅವರ ಕ್ರಿಯಾಶೀಲತೆ, ನವನವೋನ್ಮೇಶಶಾಲಿ ಪ್ರತಿಭೆ. ನಾಯಕತ್ವದ ಗುಣಗಳಿಂದಾಗಿ ಆಗಲೇ ವಿದ್ಯಾರ್ಥಿಗಳ ನಡುವೆ ಸಾಕಷ್ಟು ಜನಪ್ರಿಯರಾಗಿದ್ದರು. ಅಧ್ಯಾಪಕರು, ಆಡಳಿತ ವರ್ಗದವರೊಂದಿಗೆ ನೇತೃತ್ವದ ಗುಣ ಹಾಗೂ ತುಂಟತನದ ಕಾರಣದಿಂದಲೂ ಸಾಕಷ್ಟು ಖ್ಯಾತಿಗಳಿಸಿದ್ದರು. ಕಾಲೇಜಿನ ವಿವಿಧ ಚಟುವಟಿಕೆಗಳು, ಚಳುವಳಿಗಳಲ್ಲೂ ಅವರ ನೇತೃತ್ವ ಸಹಜವಾಗಿ ಇರುತ್ತಿತ್ತು. ವಿದ್ಯಾರ್ಥಿ ಪರಿಷತ್ತಿನ ಧ್ಯೇಯ, ಕಾರ್ಯೋದ್ದೇಶಗಳು ಒಮ್ಮೆ ಅವರ ಮನಸ್ಸಿನಲ್ಲಿ ನೆಲೆಯೂರಿದ ನಂತರ ಅವರ ಕಾರ್ಯೋತ್ಸಾಹಕ್ಕೊಂದು ಹೊಸ ಉದ್ದೇಶ ಲಭಿಸಿದಂತಾಯಿತು, ನಡವಳಿಕೆಯ ಶೈಲಿಯೂ ಬದಲಾಯಿತು.

ಆ ಸಮಯದಲ್ಲಿ ನಾನು ಹುಬ್ಬಳ್ಳಿಗೆ ಆಗಿಂದಾಗ್ಗೆ ಹೋಗುತ್ತಿದ್ದೆ. ವಿದ್ಯಾರ್ಥಿ ಪರಿಷತ್ತಿನ ಕೆಲಸ ಕೆಲವೇ ನಗರಗಳಿಗೆ ಸೀಮಿತವಾಗಿದ್ದು ಹುಬ್ಬಳ್ಳಿಯೊಂದು ಪ್ರಮುಖ ಕೇಂದ್ರವಾಗಿದ್ದುದೂ ಆದಕ್ಕೊಂದು ಕಾರಣ. ಹುಬ್ಬಳ್ಳಿಗೆ ಹೋದಾಗಲೆಲ್ಲ ಊಟ, ವಸತಿಗಳಿಗೆ ಕಾರ್ಯಕರ್ತರ ಮನೆಯೇ ಆಶ್ರಯಸ್ಥಾನ. ಆಚ್ಚುತ ಲಿಮಯೆಯವರ ಮನೆಯೇ ಒಂದು ರೀತಿಯಲ್ಲಿ ಅಘೋಷಿತ ಕಾರ್ಯಾಲಯವಾಗಿಬಿಟ್ಟಿತ್ತು. ಊಟವೂ ಸಾಮಾನ್ಯವಾಗಿ ಕಾರ್ಯಕರ್ತರ ಮನೆಗಳಲ್ಲಿಯೇ. ಒಮ್ಮೆ ಅನಂತಕುಮಾರ್ ಅವರ ಮನೆಯಲ್ಲಿ ಊಟ ಮಾಡಿ ಅಲ್ಲಿಂದ ಹೊರಡುವ ಸಂದರ್ಭದಲ್ಲಿ ಶ್ರೀಮತಿ ಗಿರಿಜಾಶಾಸ್ತ್ರಿಯವರು ಗೇಟಿನವರೆಗೆ ಜೊತೆಗೆ ಬಂದವರು ಉದ್ಗಾರವೆತ್ತಿದರು. "ನನ್ನ ಮಗ ಎಷ್ಟು ತುಂಟತನ ಮಾಡುತ್ತಿದ್ದನೆಂದರೆ ಇವನೆಲ್ಲಿ ದಾರಿ ತಪ್ಪಿ ಹೋಗುತ್ತಾನೋ ಎಂದುಕೊಂಡಿದ್ದೆ. ನೀವು ನನ್ನ ಮಗನನ್ನು ಉಳಿಸಿಕೊಟ್ಟಿದ್ದೀರಿ". ನಾನೆಂದೆ, "ಹಾಗೆನ್ನಬೇಡಿ ಹುಟ್ಟಿನಿಂದಲೇ ಅವನು ಉತ್ತಮ ಸಂಸ್ಕಾರಗಳನ್ನು ಪಡೆದುಕೊಂಡಿದ್ದಾನೆ. ತಪ್ಪು ದಾರಿಯಲ್ಲಿ ಹೋಗಲು ಎಂದಿಗೂ ಸಾಧ್ಯವಿಲ್ಲ. ಚಿಕ್ಕವಯಸ್ಸಿನಲ್ಲಿ ಒಂದಿಷ್ಟು ತುಂಟತನ ಮಾಡುತ್ತಿರಬಹುದು, ದೊಡ್ಡವನಾದಂತೆಲ್ಲ ಉತ್ತಮ ನಾಯಕನಾಗುತ್ತಾನೆ". ನನ್ನ ಅಂದಿನ ಮಾತು ಅಕ್ಷರಶಃ ನಿಜವಾಯಿತು.

ಅನಂತಕುಮಾರ್, ಅಚ್ಯುತ ಲಿಮಯೆ, ಅನಿಲ ಸಹಸ್ರಬುದ್ಧೆ, ಡಾ. ವ್ಯಾಸ ದೇಶಪಾಂಡೆ, ಡಾ. ವಿಷ್ಣುಕಾಂತ ಚಟಪಲ್ಲಿ ಮುಂತಾದವರ ನೇತೃತ್ವದಲ್ಲಿ ಹುಬ್ಬಳ್ಳಿ ಧಾರವಾಡಗಳಲ್ಲಿ ವಿದ್ಯಾರ್ಥಿ ಪರಿಷತ್ತಿನ ಕೆಲಸ ಭದ್ರವಾಗಿ ನೆಲೆಯೂರುತ್ತ ಸಾಗಿತು. ೧೯೮೦ರಲ್ಲಿ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಸಮ್ಮೇಳನವನ್ನು ಹುಬ್ಬಳ್ಳಿಯಲ್ಲಿ ನಡೆಸಬೇಕೆಂದು ಸಂಘಟನೆಯ ಹಿರಿಯರು ಯೋಚಿಸಿದರು. "ಅಲ್ಲಿನ ಕಾರ್ಯಕರ್ತರನ್ನೊಮ್ಮೆ ಕೇಳಿ ತಿಳಿಸುತ್ತೇನೆ" ಎಂದು ನಾನು ಹೇಳಿದೆ. ಹುಬ್ಬಳ್ಳಿಯ ಕಾರ್ಯಕರ್ತರೊಂದಿಗೆ ವಿಷಯ ಮುಂದಿಟ್ಟಾಗ ಪ್ರಾರಂಭದಲ್ಲಿ ಸ್ವಲ್ಪ ಹಿಂದೇಟು ಹಾಕಿದರೂ ನಂತರ ಉತ್ಸಾಹದಿಂದಲೇ ಒಪ್ಪಿಕೊಂಡರು. ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು, ಅಧ್ಯಾಪಕರು ಸೇರಲಿರುವ ಮೂರು ದಿನಗಳ ಸಮ್ಮೇಳನಕ್ಕೆ, ಅದಕ್ಕೆ ಮುಂಚೆ ಮತ್ತು ನಂತರವೂ ಒಟ್ಟು ಒಂದು ವಾರ ಕಾಲ ನಡೆಯಲಿದ್ದ ಸಮಾವೇಶಕ್ಕೆ




ವ್ಯವಸ್ಥೆ ಮಾಡುವುದು ಸುಲಭದ ಮಾತಾಗಿರಲಿಲ್ಲ. ಹುಬ್ಬಳ್ಳಿಯಲ್ಲಿ ನಮ್ಮ ಕಾರ್ಯಕರ್ತರಾಗಿದ್ದವರೆಲ್ಲ ಹದಿವಯಸ್ಸಿನ ಯುವಕರು. ಕಾಲೇಜಿನ ವಿದ್ಯಾರ್ಥಿಗಳು. ಅವರ ಬಲದ ಮೇಲೆ ಇಷ್ಟು ದೊಡ್ಡ ಸಮ್ಮೇಳನ ನಡೆಸುವುದು ದೊಡ್ಡ ಸಾಹಸವೇ ಆಗಿತ್ತು. ಆದರೆ ಹುಬ್ಬಳ್ಳಿಯ ಕಾರ್ಯಕರ್ತರು ಈ ಅಸಾಧಾರಣವೆಂದು ತೋರುತ್ತಿದ್ದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಈ ಸಮ್ಮೇಳನದ ನಿರ್ವಹಣೆಯಲ್ಲಿ ಅನಂತಕುಮಾರ್ ಅವರ ಕರ್ತೃತ್ವ ಶಕ್ತಿಯೂ ಸಹಜವಾಗಿ ಬೆಳಕಿಗೆ ಬಂದಿತ್ತು. ತಮ್ಮ ಸಹಜವಾದ ನೇತೃತ್ವ ಗುಣದಿಂದಾಗಿ ಅನಂತಕುಮಾರ್ ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಪ್ರಭಾವೀ ಯುವ ನಾಯಕರಾಗಿ ಹೊರ ಹೊಮ್ಮಿದರು.

ವಿದ್ಯಾರ್ಥಿ ಪರಿಷತ್ತಿನ ಕಾರ್ಯದಲ್ಲಿ ಹಲವು ವರ್ಷಗಳಿಂದ ಸಕ್ರಿಯವಾಗಿ ತೊಡಗಿಕೊಂಡಿದ್ದ ಹಿನ್ನೆಲೆಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ಹೊರ ಬರುವ ನಿರ್ಧಾರವನ್ನು ಮಾಡಿದರು. ಪೂರ್ಣಾವಧಿ ಕಾರ್ಯಕರ್ತರಾದ ನಂತರ ಇಡೀ ಪ್ರಾಂತದಲ್ಲಿ ಅವರ ಬಿರುಗಾಳಿ ಪ್ರವಾಸ ಆರಂಭವಾಯಿತು. ಅವರ ಕಾರ್ಯಶೈಲಿಯಲ್ಲಿ ಮುಖ್ಯವಾಗಿ ಎರಡು ಸಂಗತಿಗಳು ಎದ್ದು ಕಾಣುತ್ತಿದ್ದವು. ಒಂದು ಅವರ ಬಿಡುವಿಲ್ಲದ ಪ್ರವಾಸ. ಅವರ ಪ್ರವಾಸದ ವೈಖರಿಯನ್ನು ನೋಡಿ ಹಿರಿಯ ಪ್ರಚಾರಕರೊಬ್ಬರು ಅವರಿಗೆ ಅವಿಶ್ರಾಂತಚೇತನ ಎಂಬ ಅಭಿಧಾನವನ್ನು ನೀಡಿದ್ದರು. ಸಂಪರ್ಕಕ್ಕೆ ಬಂದ ಕಾರ್ಯಕರ್ತರೆಲ್ಲರನ್ನು ನೆನಪಿಟ್ಟುಕೊಳ್ಳುತ್ತಿದ್ದುದು ಅವರ ಇನ್ನೊಂದು ವಿಶೇಷ. ಬಹುಶಃ ಪ್ರಾಂತದಾದ್ಯಂತ ಸಾವಿರಾರು ಕಾರ್ಯಕರ್ತರನ್ನು ಅವರು ಹೆಸರು ಹಿಡಿದು ಕರೆಯಬಲ್ಲವರಾಗಿದ್ದರು. ಕಾರ್ಯಕರ್ತರೊಂದಿಗೆ ಒಡನಾಟ ಸಂಘಟನೆಯ ಕೆಲಸದೊಂದಿಗೆ ವಿದ್ಯಾರ್ಥಿಪರಿಷತ್ತಿನ ವೈಚಾರಿಕ ವಿಕಾಸದಲ್ಲಿಯೂ ಅವರ ಕೊಡುಗೆ ಮಹತ್ವದ್ದಾಗಿತ್ತು. ಕಾಲಕಾಲಕ್ಕೆ ನಡೆಯುತ್ತಿದ್ದ ವಿದ್ಯಾರ್ಥಿ ಪರಿಷತ್ತಿನ ಅಭ್ಯಾಸವರ್ಗಗಳಲ್ಲಿ ಹಲವು ತಾತ್ವಿಕ, ಸಂಘಟನಾತ್ಮಕ ವಿಷಯಗಳನ್ನು ಕುರಿತು ಪ್ರತಿಪಾದನೆ ಮಾಡುತ್ತಿದ್ದ ರೀತಿ ಉದ್ಬೋಧಕವಾಗಿರುತ್ತಿತ್ತು.

ಪೂರ್ಣಾವಧಿ ಕಾರ್ಯಕರ್ತರಾಗಿ ೩ ವರ್ಷಗಳ ಕಾಲ ಕೆಲಸ ಮಾಡಿದ ನಂತರ ಸ್ವಂತ ಜೀವನಕ್ಕೆ ಮರಳುವ ನಿರ್ಧಾರಮಾಡಿದರು. ತೇಜಸ್ವಿನಿಯವರೂ ಆ ವೇಳೆಗೆ ವಿದ್ಯಾರ್ಥಿ ಪರಿಷತ್ತಿನಲ್ಲಿ ಪ್ರಮುಖ ಕಾರ್ಯಕರ್ತೆಯಾಗಿ ಗುರುತಿಸಿಕೊಂಡಿದ್ದರು. ಸೋನೇ ಮೇ ಸುಗಂಧ್ ಹೈ ಎನ್ನುವ ನಾಣ್ಣುಡಿಯೊಂದು ಹಿಂದಿಯಲ್ಲಿದೆ. ಹಾಗೆಯೇ ಸಮಾನ ಧ್ಯೇಯೋದ್ದೇಶಗಳನ್ನು ಜೀವನಾದರ್ಶಗಳನ್ನು ಹೊಂದಿದ್ದ ಅವರಿಬ್ಬರ ಜೋಡಿ ಅಪೂರ್ವ ಜೋಡಿಯಾಗುವುದೆಂದು ಇಬ್ಬರನ್ನು ಹತ್ತಿರದಿಂದ ನೋಡಿದ್ದವರೆಲ್ಲರಿಗೂ ಅನಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ವಿದ್ಯಾರ್ಥಿ ಪರಿಷತ್ತಿನಲ್ಲಿ ಪೂರ್ಣಾವಧಿ ಕಾರ್ಯಕರ್ತನಾಗಿ ನಿವೃತ್ತರಾದ ನಂತರ ವಕೀಲಿವೃತ್ತಿಯಲ್ಲಿ ತೊಡಗಬೇಕೆನ್ನುವುದು ಅವರ ಯೋಚನೆಯಾಗಿತ್ತು. ಅದಕ್ಕಿಂತ ಮುಂಚೆ ಐಎಎಸ್ ಪರೀಕ್ಷೆ ತೆಗೆದುಕೊಳ್ಳಬೇಕೆಂದು ಅದಕ್ಕಾಗಿ ಅವರು ಸಿದ್ಧತೆ ನಡೆಸಿದ್ದರು. ಅವರು ಆ ಹಾದಿಯಲ್ಲಿ ಮುಂದೆ ಹೋಗುವುದನ್ನು ತಪ್ಪಿಸಲು ನಾನೇ ಕಾರಣನಾಗಿದ್ದೆ. ಅವರ ಪರೀಕ್ಷೆಯ ಪ್ರವೇಶ ಪತ್ರವನ್ನು ಕೈಗೆ ತೆಗೆದುಕೊಂಡು ನಾನು ಹರಿದು ಹಾಕಿದೆ ಎಂದು ಅವರು ಹೇಳುತ್ತಿದ್ದರು. ಹರಿದು ಹಾಕಿದ್ದು ನನಗೆ ನೆನಪಿಲ್ಲ. ಆದರೆ ನಿನಗೆ ಇದಕ್ಕಿಂತ ಹೆಚ್ಚಿನ ಜವಾಬ್ದಾರಿ ನಿರ್ವಹಿಸಬೇಕಾದದ್ದಿದೆ ಎಂದು ಹೇಳಿ ದಾರಿಯನ್ನು ಬದಲಿಸಿದ್ದಂತೂ ಹೌದು. ಹಿಂದಿರುಗಿ ನೋಡಿದಾಗ ನಾನು ತಪ್ಪು ಮಾಡಿದೆ ಎಂದೇನೂ ಅನಿಸುತ್ತಿಲ್ಲ.

ಬೆಂಗಳೂರಿನಲ್ಲಿ ವಕೀಲಿ ವೃತ್ತಿಗೆ ಪ್ರವೇಶಿಸಬೇಕೆಂಬ ಸನ್ನಾಹದಲ್ಲಿದ್ದಾಗ ಸಂಘದ ಕಡೆಯಿಂದ ಅವರು ಭಾರತೀಯ ಜನತಾ ಪಕ್ಷದ ಸಂಘಟನೆಯ ಜವಾಬ್ದಾರಿ ತೆಗೆದುಕೊಳ್ಳಬೇಕೆಂಬ ಸೂಚನೆ ಬಂದಿತು. ಹಾಸನದಲ್ಲಿ ನಡೆದಿದ್ದ

ಪುಟ 6 ರಲ್ಲಿ ಮುಂದುವರೆದಿದೆ



# ಪಾರಂಪರಿಕ ಜ್ಞಾನದ ಬೆಳಕಿನಲ್ಲಿ ಪರಿಸರದ ರಕ್ಷಣೆ

ಡಾ. ಎ.ಎನ್.ಯಲ್ಲಪ್ಪರೆಡ್ಡಿ

ದೇಶಕ್ಕೊಂದು ವ್ಯಕ್ತಿತ್ವವಿದೆ ಎನ್ನುವುದಾದರೆ ಈ ವ್ಯಕ್ತಿತ್ವವನ್ನು ಗ್ರಹಿಸುವುದು ಅದರ ಸಂಸ್ಕೃತಿಯ ಮೂಲಕ

ಈ ಸಂಸ್ಕೃತಿ ನಮ್ಮ ದಿನನಿತ್ಯದ ಬದುಕಿನ ಅವಿನಾಭಾಗವಾಗಿರುತ್ತದೆ. ವಿವಿಧ ಸಾಂಸ್ಕೃತಿಕ ಆಚರಣೆಗಳ ಮೂಲಕ ನಾವು ಸಂಸ್ಕೃತಿಯನ್ನು ಪಾರಂಪರಿಕವಾಗಿ ಅನುಸರಿಸಿಕೊಂಡು ಬರುತ್ತೇವೆ. ಅನೇಕ ವ್ರತಾಚರಣೆಗಳು ನಮ್ಮ ಸಂಸ್ಕೃತಿಯ ಭಾಗವಾಗಿವೆ. ಉದಾಹರಣೆಗೆ, ನಮ್ಮ ದೇಶದಲ್ಲಿ ವಟಸಾವಿತ್ರಿಯ ವ್ರತವನ್ನು ಆಚರಿಸುತ್ತಾರೆ. ಇದರ ವಿಶೇಷವನ್ನಾಗಲಿ, ವೈಜ್ಞಾನಿಕ ಮಹತ್ವವನ್ನಾಗಲಿ ಯಾರೂ ಅಧ್ಯಯನ ಮಾಡಿದಂತೆ ಕಂಡು ಬರುವುದಿಲ್ಲ.

ವಟವೃಕ್ಷ ವ್ರತದ ಬಗ್ಗೆ ಗುರುಗಳಾದ ಶ್ರೀ ಎಸ್ ಕೆ ರಾಮಚಂದ್ರ ರಾಯರ ಜೊತೆ ಚರ್ಚೆ ಮಾಡುವಾಗ ಅನೇಕ ವಿಷಯಗಳು ತಿಳಿದು ಬಂದವು. ಅದರಂತೆ ತನ್ನ ಪತಿ ಸತ್ಯವಾನರು ಪ್ರಾಣ ಬಿಡುವ ದಿನದ ವಿಚಾರ ಸತಿ ಸಾವಿತ್ರಿಗೆ ಮೊದಲೇ ಗೊತ್ತಾಗಿತ್ತು. ಆದುದರಿಂದ ಆಕೆಯೂ ಪತಿಯ ಜೊತೆ ಕಾಡಿಗೆ ಹೋದರು. ವಟವೃಕ್ಷದ ಕೆಳಗೆ ಮಲಗಿದ ಸತ್ಯವಾನನ ಪ್ರಾಣಪಕ್ಷಿ ಹಾರಿ ಹೋಯಿತು. ಪ್ರಾಣವನ್ನು ಕೊಂಡೊಯ್ಯಲು ಬಂದ ಯಮದೂತರಿಗೆ ಅವರ ಶರೀರವನ್ನು ಮುಟ್ಟುವುದು ಕೂಡ ಸಾಧ್ಯವಾಗಲಿಲ್ಲ. ಯಾವುದೋ ಒಂದು ಶಕ್ತಿ ಅವರನ್ನು ತಡೆಯುತ್ತಿತ್ತು. ಯಮನ ಶಕ್ತಿಯನ್ನು ಮೀರುವ ಶಕ್ತಿಯುಳ್ಳವರು ಅಂದರೆ ಮೃತ್ಯುವನ್ನು ಗೆಲ್ಲಬಲ್ಲವರು ಈ ಜಗತ್ತಿನಲ್ಲಿ ಯಾರೂ ಇಲ್ಲವಲ್ಲ ಎಂದು ಅಚ್ಚರಿ ಪಡುತ್ತ ಯಮಧರ್ಮರಾಯ ತಾನೇ ಬರುತ್ತಾನೆ. ಸತಿಸಾವಿತ್ರಿಯು ಏನು ಮಾಡಬೇಕೆಂದು ತಿಳಿಯದೆ “ನನಗೇನೂ ಗೊತ್ತಿಲ್ಲ, ನನ್ನ ಗಂಡ ಬದುಕಬೇಕು, ಅಷ್ಟೇ ನನ್ನ ಕೋರಿಕೆ” ಎಂದು ವಟವೃಕ್ಷವನ್ನೇ ಕೇಳುತ್ತಾರೆ. ಆಗ ಆ ವಟವೃಕ್ಷವು ಅವರಿಗೆ ಅಲ್ಲಿಗೆ ಬಂದಿರುವ ಯಮನನ್ನು ಯಾವ ರೀತಿ ಎದುರಿಸಬೇಕು ಎನ್ನುವ ಜ್ಞಾನವನ್ನು ನೀಡುತ್ತದೆ.

ಮುಂದಿನ ಕಥೆ ತಿಳಿದೇ ಇದೆ. ಯಮಧರ್ಮರಾಯ ಸಾವಿತ್ರಿಗೆ ಮೂರು ವರಗಳನ್ನು ನೀಡುತ್ತಾನೆ. ತಾನು ಕೊಟ್ಟ ವರಕ್ಕೆ ಕಟ್ಟುಬಿದ್ದು ಗತ್ಯಂತರವಿಲ್ಲದೆ ಸತ್ಯವಾನರನ್ನೂ ಬದುಕಿಸುತ್ತಾನೆ.




ನಿವೃತ್ತ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಪರಿಸರ ತಜ್ಞರಾದ ಡಾ. ಎ.ಎನ್. ಯಲ್ಲಪ್ಪ ರೆಡ್ಡಿಯನ್ನು ಅನಂತಪಥ ಪತ್ರಿಕೆಯ 12ನೇ ಸಂಚಿಕೆಯನ್ನು ಬಿಡುಗಡೆ ಮಾಡಿ, ನಿಸರ್ಗ ಸಂರಕ್ಷಣೆಯ ಮಹತ್ವವನ್ನು ಕುರಿತು ಭಾಷಣ ಮಾಡಿದರು. ಆ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿದೆ.

ಒಂದು ವಟವೃಕ್ಷಕ್ಕೆ ಮೃತ್ಯು ದೇವತೆಯನ್ನೇ ಎದುರಿಸುವಷ್ಟು ಸಾಮರ್ಥ್ಯವಿರುತ್ತದೆ ಎಂಬುದು ಇದರ ತಾತ್ಪರ್ಯ.

ಈ ರೀತಿಯಾಗಿ ವೃಕ್ಷಗಳಲ್ಲಿ ನಮ್ಮ ಆರೋಗ್ಯಕ್ಕೆ ಪೂರಕವಾದ ಅಂಶಗಳನ್ನು ಗುರುತಿಸಿ ಅವುಗಳನ್ನು ಪೂಜಿಸುವ ಸಂಸ್ಕೃತಿ ನಮ್ಮದು. ಋಗ್ವೇದ, ಪುರುಷ ಸೂಕ್ತ ಮುಂತಾದ ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಇಂತಹ ಅನೇಕ ವಿಚಾರಗಳನ್ನು ಗಮನಿಸಬಹುದು. ಶ್ರೀ ಶಂಕರಾಚಾರ್ಯರೂ ಈ ಕುರಿತು ಬಹಳ ಹೇಳಿದ್ದಾರೆ.

ಇಂದು ನಗರ ಪ್ರದೇಶದಲ್ಲಿ ಅರಣ್ಯೀಕರಣದ ಅವಶ್ಯಕತೆ ತುಂಬ ಇದೆ. ಬೆಂಗಳೂರು ನಗರವೂ ಸೇರಿದಂತೆ ಜಗತ್ತಿನ ಎಲ್ಲ ನಗರಗಳು ಇಂದು ಕಾಂಕ್ರೀಟ್ ಕಾಡುಗಳಾಗಿವೆ. ಎಲ್ಲ ಕಡೆ ಮಿತಿಮೀರಿದ ವಾಹನ ದಟ್ಟಣೆಯಿಂದಾಗಿ ಪರಿಸರ ಮಾಲಿನ್ಯ ಅತಿಯಾಗಿದೆ, ಹವಾಮಾನ ವೈಪರೀತ್ಯಗಳಿಗೂ ಇದು ಕಾರಣವಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಇದರ ಪರಿಣಾಮದ ಭೀಕರತೆ ಅರಿವಾಗುತ್ತದೆ. ಇದರ ಪರಿಣಾಮವಾಗಿ **2.8** ಬಿಲಿಯ ವರ್ಷಗಳ ನಂತರ ಹಸಿರು ಕಣ **(Green Pigment)** ಕಾಣಿಸಿಕೊಂಡಿದೆ. ಸುಮಾರು **4.5** ಬಿಲಿಯ ವರ್ಷಗಳ ಹಿಂದೆ ಭೂಮಿಯ ಉಗಮವಾಯಿತು. ಭೂಮಿಯಲ್ಲಿ ಮೊತ್ತಮೊದಲಿಗೆ **350** ಕೋಟಿ ವರ್ಷಗಳ ಹಿಂದೆ ಜೀವದ ಕುರುಹು ಕಾಣಿಸಿಕೊಂಡಿತು. ಅದು ಇಂದಿನ ರೂಪದಲ್ಲಿ ಕಾಣಿಸಿಕೊಳ್ಳಲು ಸುಮಾರು **350** ಕೋಟಿ ವರ್ಷಗಳೇ ಬೇಕಾದವು. ಭೂಮಿಯನ್ನು ಹೊರತು ಪಡಿಸಿದರೆ ಜೀವವಿರುವ ಕುರುಹು ಹೊಂದಿರುವ ಬೇರೊಂದು ಗ್ರಹ ಇಡೀ ವಿಶ್ವದಲ್ಲಿಯೇ ಇಲ್ಲ.

ನಮ್ಮ ನಂದಿ ಬೆಟ್ಟದಲ್ಲಿ ಕಾಣಸಿಗುವ ಶಿಲಾ ಸಮೂಹಗಳು ಭಾರತದ ಅತ್ಯಂತ ಪ್ರಾಚೀನ ಶಿಲಾಸಮೂಹಗಳಲ್ಲಿ ಒಂದಾಗಿದ್ದು ಸುಮಾರು **3.5** ಬಿಲಿಯ ವರ್ಷಗಳಷ್ಟು ಹಳೆಯದಾಗಿವೆ. ಅದೇ ರೀತಿ, ಸಾವನದುರ್ಗ, ರಾಮನಗರಗಳ ಶಿಲಾಬೆಟ್ಟಗಳೂ ಕೂಡ ಅತ್ಯಂತ ಪ್ರಾಚೀನವಾದವುಗಳು. ನಮ್ಮ ಅಜ್ಞಾನದಿಂದ ಮತ್ತು ಲಾಭಕ್ಕಾಗಿ ಅವುಗಳನ್ನು ಕೇವಲ ಕಲ್ಲಿನ ಬೆಟ್ಟಗಳು ಎಂದು ಭಾವಿಸಿ ಡೈನಮೈಟ್ ಬಳಸಿ ಒಡೆಯಬಹುದು, ಯಂತ್ರಗಳನ್ನು ಬಳಸಿ ಪುಡಿ ಮಾಡಿ ಕೃತಕ ಮರಳು ತಯಾರಿಸಬಹುದು. ಹದಿನಾರನೆಯ ಶತಮಾನದಲ್ಲಿ ಬದುಕಿದ್ದ ಬ್ರಿಟಿಷ್ ತತ್ತ್ವಜ್ಞಾನಿ, ಆರ್ಥಿಕ ತಜ್ಞ, ಫ್ರಾನ್ಸಿಸ್ ಬೇಕನ್ ಪ್ರತಿಪಾದಿಸಿದ “ಭೂ ತಾಯಿಯು ನಮ್ಮ ಮನೆಯ ಸೇವಕಿ, ಅವಳನ್ನು ನಾವು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು” ಎಂಬ ತತ್ತ್ವದ ವಿಪರೀತ ಪರಿಣಾಮವಿದು. ನಾವು ಅಭಿವೃದ್ಧಿಯ ಹೆಸರಿನಲ್ಲಿ ಬೃಹತ್ ಯಂತ್ರಗಳನ್ನು ಬಳಸಿ ಬಂಡೆಗಳನ್ನು ಒಡೆದು, ಬೆಟ್ಟಗುಡ್ಡಗಳನ್ನು ನೆಲಸಮ ಮಾಡಿ, ಅರಣ್ಯಗಳನ್ನು ನಾಶ ಮಾಡಿ ಅನಾಹುತ ಮಾಡಿದ್ದೇವೆ. ಒಂದು ಡೈನಮೈಟ್ ಬಳಸಿದರೆ ವಿಶಾಲವಾದ ವ್ಯಾಪ್ತಿಯಲ್ಲಿ ವಿನಾಶ ಉಂಟಾಗುತ್ತದೆ.

ನಾವು ಲಲಿತಾ ಸಹಸ್ರನಾಮದಲ್ಲಿ ಅಮ್ಮನನ್ನು ಪರ್ವತನಿವಾಸಿನಿ ಎಂದು ಕರೆದಿದ್ದೇವೆ. ಆಕೆಯನ್ನು ಪರ್ವತಗಳಲ್ಲಿ ಗುರುತಿಸಿದ್ದೇವೆ. ಆ ಪರ್ವತಗಳಿಂದ ಜೀವ ನದಿಗಳು ಹುಟ್ಟಿ ಹರಿಯುತ್ತವೆ. ಈ ನದಿಗಳು ಜನಜೀವನದಲ್ಲಿ ಸಾಕಷ್ಟು ಬದಲಾವಣೆಗಳನ್ನು ಉಂಟು ಮಾಡಿವೆ. ಪರ್ವತಗಳನ್ನು ನಾಶ ಮಾಡುವುದರಿಂದ ಜೀವ ಸಂಕುಲವೇ ನಾಶವಾಗುತ್ತದೆ.

ನಾವು ಭಾರತೀಯರು ಇಡೀ ಜಗತ್ತಿನಲ್ಲಿಯೇ ಅದೃಷ್ಟವಂತರು. ನಮ್ಮಲ್ಲಿರುವಷ್ಟು ಜ್ಞಾನ ಮತ್ತು ಜೈವಿಕ ಸಂಪತ್ತು ಬೇರೆ ಯಾವ ದೇಶದಲ್ಲಿಯೂ ಕಾಣಸಿಗುವುದಿಲ್ಲ. ನಮ್ಮ ಪೂರ್ವಿಕರು ದೇವರು ಕೊಟ್ಟಿರುವ ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳುವ ಅಗತ್ಯವನ್ನು ಮನಗಂಡು ಅವುಗಳನ್ನು ನಮ್ಮ ಧಾರ್ಮಿಕ ಆಚರಣೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ನಾವು ಆಚರಿಸುವ ಒಂದು ಪ್ರಮುಖ ವ್ರತ, ಸಿದ್ಧಿವಿನಾಯಕನ ವ್ರತ. ಈ ವ್ರತದ ಭಾಗವಾಗಿ ಪತ್ರಪೂಜೆ ಎಂದು ಮಾಡುತ್ತೇವೆ. ಇದರಲ್ಲಿ ಮರಗಳಿಂದ ದೊರೆಯುವ **21** ಪತ್ರಗಳನ್ನು ಮಂತ್ರಪೂರ್ವಕವಾಗಿ ಅರ್ಪಿಸುತ್ತೇವೆ. ಬಿಲ್ವಪತ್ರ, ಬದರೀಪತ್ರ, ಚೂತಪತ್ರ, ಕರವೀರ ಪತ್ರ, ದಾಲಿಂಬಪತ್ರ, ಮುಂತಾದ **21** ಪತ್ರಗಳ ಹೆಸರುಗಳು ಈ ಪಟ್ಟಿಯಲ್ಲಿವೆ. ಇದರ

ಪುಟ 8 ರಲ್ಲಿ ಮುಂದುವರೆದಿದೆ

# ಸಂಸದರ ಗ್ರಾಮಾಭಿವೃದ್ಧಿ ಯೋಜನೆ

ಪುಟ 1 ರಿಂದ ಸುಭಿಕ್ಷ ಗ್ರಾಮ ಯೋಜನೆಯ ಅಡಿಯಲ್ಲಿ ದತ್ತು ತೆಗೆದುಕೊಂಡಿರುವ ಈ ಹಳ್ಳಿಯಲ್ಲಿ ಇಂದು ಪ್ರತಿಯೊಂದು ಮನೆಯಲ್ಲಿಯೂ ಶೌಚಾಲಯವಿದೆ, ಗೊಬ್ಬರ ಅನಿಲ ಸ್ಥಾವರವಿದೆ. ಗ್ರಾಮದಲ್ಲಿ **2000** ತಡೆದಿಬ್ಬಗಳನ್ನು ನಿರ್ಮಿಸಿರುವುದರಿಂದ ಮಣ್ಣಿನ ಸವಕಳಿ ನಿಂತಿದೆ. ಜೊತೆಗೆ **4000** ಫಲ ಬಿಡುವ ಮರಗಳನ್ನು ನೆಡಲಾಗಿದೆ. ಇಂದು ಪ್ರತಿಯೊಂದು ಮನೆಯಲ್ಲಿಯೂ ಜಾನುವಾರುಗಳಿದ್ದು ಗೊಬ್ಬರ ಅನಿಲ ಸ್ಥಾವರಗಳಿಗೆ ಅಗತ್ಯವಿರುವ ಸೆಗಣಿ ಅವುಗಳಿಂದಲೇ ದೊರೆಯುತ್ತಿದೆ. ಇದರಿಂದಾಗಿ ಉರುವಲಿಗಾಗಿ ಮರಗಳನ್ನು ಕಡಿಯುವುದು ನಿಂತಿದೆ. ಅಂತರ್ಜಲದ ಮಟ್ಟದಲ್ಲಿ ಏರಿಕೆಯಾಗಿದೆ. ನೈಸರ್ಗಿಕ ಗೊಬ್ಬರವನ್ನು ಕೃಷಿಗೆ ಬಳಸುವುದರಿಂದ ರಸಗೊಬ್ಬರದ ಮೇಲಿನ ಅವಲಂಬನೆ ನಿಂತಿದೆ. ಇಂದು ಅವರು ಮಾರಾಟ ಮಾಡುವ ಹಾಲಿಗೆ ಪ್ರತಿ ಲೀಟರಿಗೆ **34** ರೂಪಾಯಿ ದೊರೆಯುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಮತೀರ್ಥ ಗ್ರಾಮದ ಪ್ರತಿಯೊಬ್ಬ ನಿವಾಸಿಯೂ ಪರಿಸರ ಕಾರ್ಯಕರ್ತರಾಗಿದ್ದಾರೆ.

**ರಾಗಿಹಳ್ಳಿಯ ಮಾದರಿ**

ಗ್ರಾಮಾಭಿವೃದ್ಧಿಯ ಈ ಅನುಭವದ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲಿರುವ ರಾಗಿಹಳ್ಳಿಯನ್ನು ಸಂಸದರ ಗ್ರಾಮಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಅನಂತಕುಮಾರ್ ದತ್ತು ಸ್ವೀಕರಿಸಿದರು. ಒಂದು ಗ್ರಾಮದ ಸಮಗ್ರ ಅಭಿವೃದ್ಧಿಗೆ ಒಂದು ಮಾದರಿ ಕಾರ್ಯ ಯೋಜನೆಯನ್ನು ನಾವು ರಾಗಿಹಳ್ಳಿಯಲ್ಲಿ ನೋಡಬಹುದು.

ಬೆಂಗಳೂರಿನಿಂದ **23** ಕಿಲೋಮೀಟರ್ ದೂರದಲ್ಲಿರುವ ರಾಗಿಹಳ್ಳಿಯ ವಿಸ್ತೀರ್ಣ **754** ಹೆಕ್ಟೇರುಗಳು. **2011** ರ ಜನಗಣತಿಯಂತೆ ಇಲ್ಲಿ ಒಟ್ಟು **402** ಮನೆಗಳಿದ್ದು **1655** ಜನರು ವಾಸವಾಗಿದ್ದಾರೆ.

**ಯೋಜನೆಯ ಫಲಶ್ರುತಿ**

ಅಕ್ಟೋಬರ್**14, 2018** ರ ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯ ಪ್ರತ್ಯಕ್ಷ ಹಾಗೂ



ರಾಗಿಹಳ್ಳಿಯ ಅಭಿವೃದ್ಧಿಗೆ ತಯಾರಿಸಲಾಗಿದ್ದ ಕಾರ್ಯಯೋಜನೆಯ ಮುಖ್ಯಾಂಶಗಳನ್ನು ಇಲ್ಲಿ ಪಟ್ಟಿ ಮಾಡಬಹುದು. ಶ್ರೀ ಅನಂತಕುಮಾರರ ಕಾರ್ಯಾವಧಿಯಲ್ಲಿ ಈ ಅಭಿವೃದ್ಧಿಕಾರ್ಯಗಳಲ್ಲಿ ಕೆಲವನ್ನು ಪೂರೈಸಲು ಸಾಧ್ಯವಾಯಿತು:

* ಇಡೀ ಗ್ರಾಮದ ಅಭಿವೃದ್ಧಿಯನ್ನು ನಿರ್ದೇಶಿಸುವ ಪ್ರೋತ್ಸಾಹ ಕೇಂದ್ರವಾಗಿರುವ "ಗ್ರಾಮ ಚೇತನ" ದ ಆವರಣದಲ್ಲಿ **20** ಆಸನಗಳ ಒಂದು ಗ್ರಾಮೀಣ ಬಿಪಿಓ, ಕೃಷಿ ಸಹಾಯ ಕೇಂದ್ರ, ವೃತ್ತಿ ತರಬೇತಿ ಕೇಂದ್ರ, ಮೇವು ಬ್ಯಾಂಕ್, ಗೋಮಾಳ, ಸಮುದಾಯ ಅಡುಗೆ ಮನೆ, ಆಸ್ಪತ್ರೆ, ಪ್ರೌಢಶಾಲೆಗಳ ಪ್ರಾರಂಭ ಮೊದಲ ಹಂತದಲ್ಲಿ.

* ಹಳ್ಳಿಯ ಇಂಧನದ ಅವಶ್ಯಕತೆಯನ್ನು ಪೂರೈಸಲು ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರ ಘಟಕ

* ಗ್ರಾಮ ಪಂಚಾಯತಿ ಕಛೇರಿಯ ಅಂತರ್ಜಾಲ ಸಂಪರ್ಕದ ಶ್ರೇಣಿಯನ್ನು **10** ಎಂಬಿಪಿಎಸ್ ಮಟ್ಟಕ್ಕೆ ಏರಿಕೆ. ಪಂಚಾಯತಿ ಕಛೇರಿಯ ಛಾವಣಿಯ ಮೇಲೆ ಸೌರ ಸ್ಥಾವರದ ನಿರ್ಮಾಣದ ಯೋಜನೆ.

* ಮನೆಗೊಂದು ಹಸುವನ್ನು ನೀಡುವ ಗೋಚೇತನ ಯೋಜನೆ. ಇದು ಹಳ್ಳಿಯ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿದ್ದು ಹೈನುಗಾರಿಕೆಯಿಂದ ಜನರ ಆದಾಯದಲ್ಲಿಯೂ ವೃದ್ಧಿಯಾಗುತ್ತದೆ. ಈ ಯೋಜನೆಯನ್ವಯ ಹಳ್ಳಿಯ **66** ಮನೆಗಳಿಗೆ ತಲಾ ಒಂದೊಂದು ಹಸು ಕೊಳ್ಳಲು **33000** ರೂಪಾಯಿ ಬಡ್ಡಿರಹಿತ ಸಾಲವನ್ನು ಮೊದಲ ಹಂತದಲ್ಲಿಯೇ ನೀಡಲಾಗಿದೆ. ಹಸುಗಳಿಗೆ ಬೇಕಾಗುವ ಹೆಚ್ಚುವರಿ ಮೇವು ಬೆಳೆಸುವ ವ್ಯವಸ್ಥೆ.

* ಹಳ್ಳಿಯ ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ರಾಜ್ಯ ಸರಕಾರ ನೀಡುವ ಮಾಸಾಶನದ ಬಗ್ಗೆ ತಿಳುವಳಿಕೆ ನೀಡಲು ಮತ್ತು ಆ ಸೌಲಭ್ಯಗಳ ಲಾಭವನ್ನು ಪಡೆಯಲು ಸಹಾಯ ಮಾಡುವ ಮಾಸಾಶನ ಮೇಳ.

* ರಾಗಿ ಹಳ್ಳಿಯು ಬ್ಯಾಂಕಿಂಗ್ ಸೌಲಭ್ಯದಿಂದ ವಂಚಿತವಾದ ಪ್ರದೇಶವಾಗಿರುವುದರಿಂದ ಪ್ರಧಾನ ಮಂತ್ರಿಯವರ ಜನಧನ ಖಾತೆಗಳನ್ನು ತೆರೆಯಲು ಮತ್ತು ಠೇವಣಿ ಸ್ವೀಕರಿಸಲು ಹಾಗೂ ಪಾವತಿ ಮಾಡಲು ಈ ಹಳ್ಳಿಯಲ್ಲಿ ಒಬ್ಬ ಬ್ಯಾಂಕಿಂಗ್ ಪ್ರತಿನಿಧಿಯ ನೇಮಕ.

* ಕುಸಿದಿರುವ ಅಂತರ್ಜಲ ಮಟ್ಟವನ್ನು ಸುಧಾರಿಸಲು ಮತ್ತು ನೀರಿನ ಸಮರ್ಪಕ ನಿರ್ವಹಣೆಗಾಗಿ ಇಲ್ಲಿನ ಭೂಪ್ರದೇಶ ಮತ್ತು ಮಳೆಯ ವಿನ್ಯಾಸವನ್ನು ಅಧ್ಯಯನ ಮಾಡಲಾಗಿದೆ. ಹಳ್ಳಿಯ ಸುಮಾರು **500** ಯುವಕರು ಉತ್ಸಾಹದಿಂದ ಅನೇಕ ತಡೆಗೋಡೆ ಮತ್ತು ಮೋರಿ/ಕಾಲುವೆಗಳನ್ನು ನಿರ್ಮಾಣ ಮಾಡಿದ್ದಾರೆ.

* ಬೇಸಿಗೆಯಲ್ಲಿ ಎಲ್ಲ ಜಲಮೂಲಗಳು ಬತ್ತಿ ಹೋಗುವುದರಿಂದ ಕುಡಿಯುವ ನೀರಿನ ಪೂರೈಕೆಗಾಗಿ ಮತ್ತು ಗಿಡ ಮರ ಪ್ರಾಣಿ ಪಕ್ಷಿಗಳಿಗೆ ನೀರುಣಿಸಲು ಟ್ಯಾಂಕರುಗಳ ವ್ಯವಸ್ಥೆ.

* ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ ಜಲ ಶುದ್ಧೀಕರಣ ಸ್ಥಾವರದ ಚಾಲನೆ.

* ಮನೆಗೊಂದು ಶೌಚಾಲಯ ನಿರ್ಮಾಣದ ಗುರಿಯ ಸಾಧನೆಯ ಮೊದಲ ಹಂತದಲ್ಲಿ **5** ಅಡಿ ಅಗಲ ಮತ್ತು **9** ಅಡಿ ಉದ್ದದ **68** ಸ್ನಾನದ ಮನೆ ಸಹಿತ ಶೌಚಾಲಯಗಳ ನಿರ್ಮಾಣ

* ಪ್ಲಾಸ್ಟಿಕ್ ಕಸವು ಪರಿಸರದ ಮೇಲೆ ಬೀರುವ ದುಷ್ಪರಿಣಾಮಗಳ ಕುರಿತು ಜನರಿಗೆ ಅರಿವು ಮೂಡಿಸಲು ನಿಯಮಿತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಲ್ಲದೆ **10** ಪ್ಲಾಸ್ಟಿಕ್ ಕಸ ಸಂಗ್ರಹಣಾ ತೊಟ್ಟಿಗಳು ಮತ್ತು ಒಂದು ಸಾಂದ್ರಕ (**Compactor**) ವನ್ನು ಒದಗಿಸಲಾಗಿದೆ.

* ಜನರ ಆರೋಗ್ಯವನ್ನು ಹದಗೆಡಿಸುವುದಲ್ಲದೆ ಅವರನ್ನು ಆರ್ಥಿಕವಾಗಿಯೂ ದುರ್ಬಲಗೊಳಿಸುವ ದುಶ್ಚಟಗಳ ನಿರ್ಮೂಲನೆಗಾಗಿ ಬೀದಿ ನಾಟಕಗಳು ಮತ್ತಿತರ ಜಾಗೃತಿ ಕಾರ್ಯಕ್ರಮಗಳು

* ಹಳ್ಳಿಯ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ ಸಾಮರಸ್ಯ ಮೂಡಿಸಲು "ನಮ್ಮೂರ ಜಾತ್ರೆ" ಎಂಬ ನವೀನ ಪರಿಕಲ್ಪನೆ. ಇದರ ಅಂಗವಾಗಿ ವಸ್ತು ಪ್ರದರ್ಶನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಟೋಟ ಸ್ಪರ್ಧೆಗಳು ಮತ್ತು ಪುರಸ್ಕಾರ ಕಾರ್ಯಕ್ರಮಗಳು.

* ಶಾಲಾ ಮಕ್ಕಳ ಅಧ್ಯಯನದ ಸೌಲಭ್ಯಕ್ಕಾಗಿ ವಿದ್ಯಾರ್ಥಿಗಳಿಗೆ **300** ಸೌರ ವಿದ್ಯುದ್ದೀಪಗಳ ಕೊಡುಗೆ.

* ಹಳ್ಳಿಯಿಂದ ಸುಮಾರು ಹತ್ತು ಕಿಲೋಮೀಟರುಗಳ ವರೆಗೆ ಸಾಲುಮರಗಳನ್ನು ಬೆಳೆಸಲು ಸಸಿಗಳನ್ನು ನೀಡಲಾಗಿದೆ. ಹೀಗೆ ನೆಡಲಾಗಿರುವ ಸಸಿಗಳಿಗೆ ನಿಯಮಿತವಾಗಿ ನೀರುಣಿಸಿ ಪೋಷಿಸಲೂ ಕೂಡ ಯೋಜನೆಯನ್ನು ನಿರೂಪಿಸಲಾಗಿದೆ.

* ಶಾಲಾ ಮಕ್ಕಳಿಗೆ ಕಲಿಕೆಯ ಅನುಕೂಲಕ್ಕಾಗಿ ಇ-ಲರ್ನಿಂಗ್ ನೇರ ಪ್ರಸಾರ ತರಗತಿಗಳನ್ನು ನಡೆಸಲಾಗುತ್ತಿದೆ. ಈ ಡಿಜಿಟಲ್ ತರಗತಿಗಳನ್ನು ವಯಸ್ಕರ ಶಿಕ್ಷಣ ಮತ್ತು ಇ-ಸಾಕ್ಷರತೆಗಾಗಿಯೂ ಬಳಸಲಾಗುತ್ತಿದೆ.

* ಮಹಿಳಾ ಸಬಲೀಕರಣಕ್ಕಾಗಿ ವಿವಿಧ ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ. ಚಪಾತಿ ತಯಾರಿಕೆ ಮತ್ತು ಪೇಪರ್ ಬ್ಯಾಗ್ ತಯಾರಿಕೆ ಮುಂತಾದ ಕೌಶಲ್ಯಗಳ ತರಬೇತಿ ಪಡೆಯುವುದರಿಂದ ಮಹಿಳೆಯರು ತಮ್ಮದೇ ಆದ ಆದಾಯಮೂಲವನ್ನು ಸೃಷ್ಟಿಸಿಕೊಳ್ಳಬಹುದಾಗಿದೆ. ಮಹಿಳೆಯರು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನೂ ಮಾಡಲಾಗಿದೆ.

* ರಾಗಿಹಳ್ಳಿಯ ಮಕ್ಕಳಿಗೆ ಬೆಂಗಳೂರಿನ ಪ್ರೌಢಶಾಲೆಗಳಲ್ಲಿ ಪ್ರವೇಶಾವಕಾಶ ಮಾಡಿಕೊಟ್ಟು ಅವರ ವ್ಯಾಸಂಗದ ಕನಸುಗಳಿಗೆ ರೆಕ್ಕೆ ನೀಡಲಾಗಿದೆ. ದಿನನಿತ್ಯ ಹಳ್ಳಿಯಿಂದ ನಗರಕ್ಕೆ ಪ್ರಯಾಣಿಸಲು ಸಾರಿಗೆ ಸೌಲಭ್ಯವನ್ನೂ ಒದಗಿಸಲಾಗಿದೆ. ಕೆಲವು ಮಕ್ಕಳಿಗೆ ವಿಶೇಷ ಬೋಧನಾ ತರಗತಿಗಳನ್ನೂ ನಡೆಸಲಾಗುತ್ತಿದೆ.

ಪುಟ 5 ರಲ್ಲಿ ಮುಂದುವರೆದಿದೆ

# ಭಾರತೀಯ ಔಷಧ ವಲಯ- ಅವಕಾಶಗಳು ಮತ್ತು ಸವಾಲುಗಳು

Nation First Dialogues
'ದೇಶ ಮೊದಲು' ಸಂವಾದ

ಜಾಗತಿಕ ಆರೋಗ್ಯಸೇವೆಗೆ ಭಾರತದ ಕೊಡುಗೆಯನ್ನು ಪರಿಗಣಿಸುವಾಗ ವೈದ್ಯರು, ಶುಶ್ರೂಷಕಿಯರು ಮತ್ತು ಔಷಧಗಳನ್ನಲ್ಲದೆ ಹೊಸ ಔಷಧಗಳ ಆವಿಷ್ಕಾರ, ಬದಲಿ ವೈದ್ಯ ಪದ್ಧತಿಗಳು ಮತ್ತು ವೈದ್ಯಕೀಯ ಪ್ರವಾಸೋದ್ಯಮ (Medical tourism) ಗಳನ್ನೂ ಗಮನಿಸುತ್ತೇವೆ. ಈ ಎಲ್ಲ ವಿಭಾಗಗಳಲ್ಲಿಯೂ ಭಾರತವು ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಜಾಗತಿಕ ಆರೋಗ್ಯ ವ್ಯವಸ್ಥೆಯಲ್ಲಿ ಭಾರತದ ಪಾತ್ರದ ವಿಸ್ತಾರಕ್ಕೆ ಇನ್ನೂ ಹೆಚ್ಚಿನ ಅವಕಾಶಗಳಿವೆ.

ಭಾರತದ ಔಷಧ ವಲಯವನ್ನು ಪ್ರತ್ಯೇಕವಾಗಿ ಗಮನಿಸುವಾಗ ನಾವು ಹೆಮ್ಮೆ ತಳೆಯಬಹುದಾದ ಅನೇಕ ವಿಷಯಗಳಿವೆ. ಅದೇ ರೀತಿ ಸುಧಾರಿಸಬೇಕಾಗಿರುವ ಅನೇಕ ಅಂಶಗಳೂ ಇವೆ. ಕಳೆದ ಒಂದೂವರೆ ವರ್ಷದಲ್ಲಿ ನಮ್ಮೆಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಸಾಂಕ್ರಾಮಿಕ ರೋಗದ ಅನುಭವ ಉಂಟಾಗಿದೆ. ಇದರಿಂದಾಗಿ ಭಾರತದಂತಹ ದೇಶದ ಸಾರ್ವಜನಿಕರ ಜೀವನದಲ್ಲಿ ಆರೋಗ್ಯವ್ಯವಸ್ಥೆಯ ಪ್ರಾಮುಖ್ಯತೆ, ದೇಶದ ಅರ್ಥವ್ಯವಸ್ಥೆಯ ಮೇಲೆ ಬೀರುವ ಪರಿಣಾಮ, ಆರೋಗ್ಯಸಂಬಂಧಿ ಸಾರ್ವಜನಿಕ ನೀತಿಗಳು ಮುಂತಾದ ಅನೇಕ ವಿಷಯಗಳ ಮೇಲೆ ಚರ್ಚೆಗಳು ಪ್ರಾರಂಭವಾಗಿವೆ.

ನಮ್ಮಲ್ಲಿ ಯಾವುದು ಉತ್ತಮ ಸ್ಥಿತಿಯಲ್ಲಿದೆ, ಯಾವ ವಿಷಯಗಳಲ್ಲಿ ಸುಧಾರಣೆಯ ಅಗತ್ಯವಿದೆ, ಜಾಗತಿಕ ಮಟ್ಟದಲ್ಲಿ ನಮ್ಮ ದೇಶವು ಎದುರಿಸುತ್ತಿರುವ ಸವಾಲುಗಳು ಯಾವುವು ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವ ಅವಶ್ಯಕತೆಯಿದೆ.

ದೇಶವು ಈಗ ಎದುರಿಸುತ್ತಿರುವ ಕೋವಿಡ್ ಸಾಂಕ್ರಾಮಿಕದ ಕಡೆ ಗಮನ ಹರಿಸೋಣ. ಲಸಿಕೆಗಳ ವಿಚಾರದಲ್ಲಿ ಇಂದು ವ್ಯಾಪಕವಾದ ಚರ್ಚೆ ನಡೆಯುತ್ತಿದೆ. 2020ರ ಮೊದಲ ಭಾಗದಲ್ಲಿ ಎಲ್ಲ ಕ್ಷೇತ್ರಗಳಂತೆ ಔಷಧ ಕ್ಷೇತ್ರವೂ ಆಘಾತಕ್ಕೊಳಗಾಯಿತು. ಆದರೆ ನಮ್ಮ ದೇಶದಲ್ಲಿ ಈ ಕ್ಷೇತ್ರವು ಬಹುಬೇಗ ಚೇತರಿಸಿಕೊಂಡಿತು. ಹೈಡ್ರಾಕ್ಸಿಕ್ಲೋರೋಕ್ವಿನ್ ಔಷಧದ ವಿಚಾರ ನಮ್ಮೆಲ್ಲರ ನೆನಪಿನಲ್ಲಿ ಇನ್ನೂ ಹಸಿರಾಗಿದೆ. ಈ ಔಷಧಿಯನ್ನು ಜಗತ್ತಿನಲ್ಲಿಯೇ ಅತಿಹೆಚ್ಚು ಉತ್ಪಾದಿಸುವ ದೇಶ ಭಾರತ. ಅದರ ಜಾಗತಿಕ ಬೇಡಿಕೆಯಲ್ಲಿ ಅಸಾಧಾರಣ ಹೆಚ್ಚಳವುಂಟಾದಾಗ ತನ್ನ ಉತ್ಪಾದನಾ ಸಾಮರ್ಥ್ಯವನ್ನು ಕೆಲವೇ ವಾರಗಳಲ್ಲಿ ಹೆಚ್ಚಿಸಿಕೊಂಡು ಜಗತ್ತಿನ ನೆರವಿಗೆ ಧಾವಿಸಲು ಭಾರತವು ಯಶಸ್ವಿಯಾಯಿತು. 2021 ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ರೆಮ್ಡೆಸಿವಿರ್, ಫಾವಿಪಿರವಿರ್ ಮುಂತಾದ ವೈರಾಣು ವಿರೋಧಿ ಮಾತ್ರೆಗಳ ಬೇಡಿಕೆಯಲ್ಲಿಯೂ ಭಾರೀ ಪ್ರಮಾಣದ ಏರಿಕೆಯಾದಾಗ ಭಾರತವು ಅದೇ ಪ್ರಮಾಣದಲ್ಲಿ ಮಾತ್ರೆಗಳ ಉತ್ಪಾದನೆಯನ್ನು ಹೆಚ್ಚಿಸಿ ಸಾಂಕ್ರಾಮಿಕದ ನಿಯಂತ್ರಣಕ್ಕೆ ಸಹಾಯ ಮಾಡಿತು. ಈ ಎರಡೂ ಸಂದರ್ಭಗಳಲ್ಲಿ ಭಾರತವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸಿ ಉತ್ಪಾದನೆಯನ್ನು ಕೆಲವು ಲಕ್ಷಗಳಿಂದ ಕೋಟಿ ಕೋಟಿಗಳ ಸಂಖ್ಯೆಗೆ ಏರಿಸದಿದ್ದಿದ್ದರೆ ಜಗತ್ತಿನ ಪರಿಸ್ಥಿತಿ ಹೇಗಿರುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ನೀವು ಇಂದು ವೃತ್ತಪತ್ರಿಕೆಗಳನ್ನು ತೆರೆದರೆ ಲಸಿಕೆಗಳ ಬಗ್ಗೆ ಅನೇಕ ವರದಿಗಳನ್ನು ಓದುತ್ತೀರಿ. ಭಾರತದಲ್ಲಿ ಅನೇಕ ಲಸಿಕೆಗಳು ಸಂಶೋಧನೆ ಮತ್ತು ಅಭಿವೃದ್ಧಿಯ ವಿವಿಧ ಹಂತಗಳಲ್ಲಿವೆ. ಭಾರತವು ಇಂದು ದೇಶೀಯವೇ ಆದ ಒಂದು ಮತ್ತು ತಂತ್ರಜ್ಞಾನ ವರ್ಗಾಯಿತವಾದ ಎರಡು ವಿದೇಶೀ ಲಸಿಕೆಗಳನ್ನು ಉತ್ಪಾದಿಸುತ್ತಿದೆ. ಕೋಟ್ಯಂತರ ಲಸಿಕೆಗಳನ್ನು ಉತ್ಪಾದಿಸುತ್ತಿದ್ದರೂ ಅದು ನಮ್ಮ ದೇಶದ ಜನಸಂಖ್ಯೆಗೆ ಹೋಲಿಸಿದರೆ ಅತ್ಯಲ್ಪ ಎನ್ನಬಹುದು. ಅದೂ ಇಲ್ಲದಿದ್ದರೆ ದೇಶದ ಗತಿಯೇನಾಗುತ್ತಿತ್ತು ಎಂದು ಊಹಿಸಲೂ ಸಾಧ್ಯವಿಲ್ಲ. ಭಾರತದ ಔಷಧ ಕಂಪೆನಿಗಳು ತಮ್ಮ ದೇಶದ ಅವಶ್ಯಕತೆಗಳನ್ನು ಪೂರೈಸುತ್ತಿರುವುದು ಮಾತ್ರವಲ್ಲ, ಇತರ ಅನೇಕ ದೇಶಗಳಿಗೂ ಔಷಧಗಳನ್ನು ಮತ್ತು ಲಸಿಕೆಗಳನ್ನು ಒದಗಿಸುತ್ತಿವೆ.

ಇದು ಹೇಗೆ ಸಾಧ್ಯವಾಯಿತು? ಇದು ರಾತ್ರೋರಾತ್ರಿ ಸಿದ್ಧಿಯಾದ ಸಾಮರ್ಥ್ಯವಲ್ಲ. ಇದು ಹಲವು ದಶಕಗಳ ಶ್ರಮದ ಪ್ರತಿಫಲವಾಗಿ ಸಾಧ್ಯವಾಗಿದೆ. ಕಳೆದ 35-40 ವರ್ಷಗಳಲ್ಲಿ ಅಗಾಧ ಪ್ರಮಾಣದಲ್ಲಿ ನಡೆದ ಸಂಶೋಧನೆ, ಪ್ರಾಯೋಗಿಕ ಪರೀಕ್ಷೆ, ಉತ್ಪಾದನೆಗಳಿಂದ ಗಳಿಸಿದ ಸಾಮರ್ಥ್ಯಗಳಿವು.

ಈ ಎಲ್ಲ ಕಾರಣಗಳಿಂದಾಗಿ, ಭಾರತವು ಇಂದು ಜೆನೆರಿಕ್ ಔಷಧಿಗಳ ಉತ್ಪಾದನೆಯ ಕ್ಷೇತ್ರದಲ್ಲಿ ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದೆ. ಆದರೆ ಜಾಗತಿಕ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಲು ಇನ್ನೊಂದು ರೀತಿಯ ಸಾಮರ್ಥ್ಯವು ಬೇಕಾಗುತ್ತದೆ. ಹೊಸ ಔಷಧಗಳ ಸಂಶೋಧನೆ, ಜೈವಿಕ ಔಷಧಿಗಳು ಮುಂತಾದ ವಿಷಯಗಳಲ್ಲಿ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಜಾಗತಿಕ ಔಷಧ ಜಗತ್ತಿನೊಡನೆ ಸಹಭಾಗಿಯಾಗುವ ಮತ್ತು ಪೂರಕವಾಗುವ ಬಗೆಗೆ ಸರಿಯಾದ ಮನಸ್ಥಿತಿ ಬೆಳೆಸಿಕೊಂಡು ಅಂತಾರಾಷ್ಟ್ರೀಯ ಗುಣ ಮಟ್ಟದ ಅನುಪಾಲನೆ, ಜಗತ್ತಿನ ಅವಶ್ಯಕತೆಗಳಿಗನುಸಾರವಾಗಿ ವೇಗವನ್ನು ಹೆಚ್ಚಿಸಿಕೊಳ್ಳುವ ಕಡೆಗೆ ಗಮನ ಹರಿಸಬೇಕಾಗಿದೆ. ಇದರ ಜೊತೆಗೆ ಇನ್ನೂ ಕೆಲವು ವಿಷಯಗಳಿವೆ. ಅವುಗಳಲ್ಲೊಂದು ಪ್ರತಿ ಔಷಧದಲ್ಲಿ ಗುಣಪಡಿಸುವ ಸಾಮರ್ಥ್ಯ ಹೊಂದಿರುವ ಸಕ್ರಿಯ ಔಷಧ ಘಟಕಗಳು. ಇದರ ಜೊತೆಗೆ ಆ ಔಷಧಗಳನ್ನು ಮನುಷ್ಯರು ಸೇವಿಸಲು ಅನುಕೂಲವಾಗುವ ರೂಪ ಮತ್ತು ಆಕಾರಗಳಲ್ಲಿ ತಯಾರಿಸಲು ಬಳಸುವ ಪೂರಕ ಘಟಕಗಳು. ಇವುಗಳನ್ನು ಉತ್ಪಾದಿಸುವ ಕಡೆಗೂ ನಮ್ಮ ಗಮನ ಹರಿಯಬೇಕು. ಪ್ಯಾಕೇಜಿಂಗ್ ಸಾಮಗ್ರಿಗಳು, ಉಪಕರಣಗಳು ಮತ್ತು ಆಧಾರಭೂತ ತಂತ್ರಜ್ಞಾನ (Platform Technologies) ಮುಂತಾದ ವಿಷಯಗಳಲ್ಲಿ ನಾವು ಸಾಧಿಸಬೇಕಾಗಿರುವುದು ಬಹಳಷ್ಟಿದೆ. ಜಾಗತಿಕ ಮಟ್ಟದಲ್ಲಿ ಅಗ್ರಸ್ಥಾನದಲ್ಲಿರಲು ನಾವು ಈ ಮೊದಲು ಹೇಳಿದ ನಮ್ಮ ಆಂತರಿಕ ಶಕ್ತಿ, ಸಂಪನ್ಮೂಲಗಳನ್ನು ಯುಕ್ತವಾಗಿ ಬಳಸಿಕೊಳ್ಳಬೇಕು. ನಾವು ಒಂದು ಘನವಾದ ಸರಬರಾಜು ಸರಪಳಿಯನ್ನು ನಿರ್ಮಿಸಿಕೊಳ್ಳಬೇಕು.

ನಮ್ಮ ಔಷಧ ಕೈಗಾರಿಕೆಯ ಸಾಮರ್ಥ್ಯಗಳನ್ನು ಮತ್ತು ನಮ್ಮದೇಶದಲ್ಲಿ ಈಗಾಗಲೇ ಇರುವ ಆರೋಗ್ಯಸೇವೆ ಮೂಲಸೌಕರ್ಯಗಳನ್ನು ಬಲಪಡಿಸುವುದು ತತ್ಕ್ಷಣದಲ್ಲಿ ಆಗಬೇಕಾದ ಕೆಲಸ. ಆರೋಗ್ಯ ಸೇವೆಯ ಮೂಲಸೌಕರ್ಯಗಳೆಂದರೆ ಕೇವಲ ಔಷಧಗಳಲ್ಲ. ಆಸ್ಪತ್ರೆಗಳು, ಸಿಬ್ಬಂದಿಗಳು, ಪ್ರಯೋಗಾಲಯಗಳು, ರೋಗಪತ್ತೆಯ ಕೇಂದ್ರಗಳು (Diagnostic Centres), ಉಪಕರಣಗಳು, ವಿಮಾ ಸೌಲಭ್ಯ, ನಿಯಂತ್ರಣ ವ್ಯವಸ್ಥೆಗಳೆಲ್ಲ ಇದರಲ್ಲಿ ಸೇರುತ್ತವೆ. ಇದರ ಜೊತೆಗೆ ವಿತರಣಾ ವ್ಯವಸ್ಥೆಯ ಕಡೆಗೂ ಗಮನ ಹರಿಯಬೇಕು. ಹೀಗೆ, ಆರೋಗ್ಯ ಸೇವೆಯ ಮೂಲ ಸೌಕರ್ಯಗಳು, ವಿತರಣಾ ವ್ಯವಸ್ಥೆ ಮತ್ತು ಹಣ ಹೂಡಿಕೆಯ ವ್ಯವಸ್ಥೆಗಳು ಏಕಕಾಲದಲ್ಲಿ ಪರಸ್ಪರ ಪೂರಕವಾಗಿ ವರ್ತಿಸಬೇಕು. ಹೀಗಾದಾಗ ನಮ್ಮ ದೇಶದ ಜನತೆಗೆ ಜಾಗತಿಕ ಮಟ್ಟದ ಶ್ರೇಷ್ಠ ಆರೋಗ್ಯ ಸೇವೆ ಲಭ್ಯವಾಗುವುದರಲ್ಲಿ ಸಂದೇಹವಿಲ್ಲ. ಈ ಮೂಲಕ ದೇಶದ ಹಾಗೂ ಜಗತ್ತಿನ ಪ್ರತಿಯೊಬ್ಬ ನಾಗರಿಕನ ಬದುಕಿನಲ್ಲಿಯೂ ಪರಿವರ್ತನೆಯನ್ನು ಉಂಟುಮಾಡುವುದು ಸಾಧ್ಯ.



**ದೀಪಕ್ ಸಪ್ರಾ**
ಸಿ ಇ ಓ, ಡಾ.ರೆಡ್ಡೀಸ್ ಲ್ಯಾಬೊರೇಟರೀಸ್, ಹೈದರಾಬಾದ್

# ಸಂಸದರ ಗ್ರಾಮಾಭಿವೃದ್ಧಿ ಯೋಜನೆ

ಪುಟ 4 ರಿಂದ ಸಂದರ್ಶನ ಆಧರಿತ ವರದಿಯ ಪ್ರಕಾರ ರಾಗಿಹಳ್ಳಿಯ ಪ್ರತಿಯೊಂದು ಮನೆಯಲ್ಲಿಯೂ ಶೌಚಾಲಯ ವ್ಯವಸ್ಥೆಯಿದ್ದು ಇದು ಇಂದು ಬಯಲುಶೌಚ ಮುಕ್ತ ಹಳ್ಳಿಯಾಗಿದೆ. ಹಳ್ಳಿಯಲ್ಲಿ ಎಲ್ಲಿಯೂ ತೆರೆದ ಚರಂಡಿಗಳು ಕಾಣಲು ಸಿಗುವುದಿಲ್ಲ. ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಒಬ್ಬ ವೈದ್ಯರು ಪ್ರತಿದಿನ ಭೇಟಿ ನೀಡುವುದರಿಂದ ಆರೋಗ್ಯ ತಪಾಸಣೆ ಮತ್ತು ಆರೈಕೆಗಾಗಿ ಬೇರೆ ಊರುಗಳಿಗೆ ಅಲೆದಾಡುವುದು ತಪ್ಪಿದೆ. ಹಳ್ಳಿಯಲ್ಲಿ ರೇಶ್ಮೆ ಕೃಷಿಕರ ಅನುಕೂಲಕ್ಕಾಗಿ ರೇಷ್ಮೆ ಹುಳು ಸಾಕಣೆ ಕೇಂದ್ರ, ಹಸುಗಳಿಗೆ ಆಶ್ರಯ ತಾಣಗಳು ಮತ್ತು ಅನೇಕ ವಸತಿ ಯೋಜನೆಗಳು ಜಾರಿಯಾಗಿದ್ದು ಜನರ ಜೀವನ ಮಟ್ಟ ಸುಧಾರಿಸಿದೆ. ಬ್ಯಾಂಕಿನ ಏಟಿಎಂ ಯಂತ್ರವೂ ಕೂಡ ಹಳ್ಳಿಯಲ್ಲಿ ಸ್ಥಾಪನೆಯಾಗಿದ್ದು ತಮ್ಮ ವ್ಯವಹಾರಗಳಿಗಾಗಿ ದೂರದ ಬ್ಯಾಂಕಿನ ಶಾಖೆಗಳಿಗೆ ಅಲೆದಾಡುವುದು ತಪ್ಪಿದೆ. ಸಂಸದರ ಗ್ರಾಮ ಅಭಿವೃದ್ಧಿಯೋಜನೆಯ ಮೂಲಕ ರಾಜ್ಯದ ಮತ್ತು ಕೇಂದ್ರದ ಅನೇಕ ಯೋಜನೆಗಳ ಪ್ರಯೋಜನವು ಹಳ್ಳಿಯ ಜನರಿಗೆ ನೇರವಾಗಿ ತಲುಪಿದೆ.

ರಾಗಿಹಳ್ಳಿಯ ಸಮಗ್ರ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನಗಳು ಹಲವಾರು. ಶುದ್ಧ ನೀರಿನ ಪೂರೈಕೆ, ಶೌಚಾಲಯಗಳ ನಿರ್ಮಾಣ ಸಮರ್ಪಕ ಚರಂಡಿ ವ್ಯವಸ್ಥೆ ಮತ್ತು ವೈದ್ಯಕೀಯ ಸೇವೆಯ ಲಭ್ಯತೆಗಳಿಂದಾಗಿ ಜನರ ಆರೋಗ್ಯದ ಮಟ್ಟದಲ್ಲಿ ಸುಧಾರಣೆಯಾಗಿದೆ. ಹಳ್ಳಿಯಲ್ಲಿ ಪ್ಲಾಸ್ಟಿಕ್ ಬಳಕೆ ಕನಿಷ್ಠ ಪ್ರಮಾಣದಲ್ಲಿದೆ. ಜೈವಿಕ ಇಂಧನಗಳನ್ನು ಬಳಸುವುದರ ಜೊತೆಗೆ ಮರ ನೆಡುವ ಕಾರ್ಯಕ್ರಮಗಳಿಂದ ಪರಿಸರ ಮಾಲಿನ್ಯ ಕಡಿಮೆಯಾಗಿದೆ.

ಜನಧನ ಖಾತೆಗಳನ್ನು ತೆರೆಯಲು ಅನುಕೂಲ ಕಲ್ಪಿಸಿದ್ದರಿಂದ ಕೇಂದ್ರ ಮತ್ತು ರಾಜ್ಯಸರಕಾರಗಳು ಕೊಡಮಾಡುವ ಸಹಾಯ ಧನಗಳು ಕಾಲವಿಳಂಬವಿಲ್ಲದೆ ಖಾತೆಗಳಿಗೆ ನೇರವಾಗಿ ಜಮೆಯಾಗುತ್ತಿವೆ. ಇದರಿಂದಾಗಿ, ಸರಕಾರದ ಹಣ ಪೋಲಾಗುವುದು ತಪ್ಪಿ ಮಧ್ಯವರ್ತಿಗಳ ಕಾಟವೂ ಇಲ್ಲದೆ ಜನರಿಗೆ ಸಹಾಯಧನ ಸಂಪೂರ್ಣವಾಗಿ ತಲುಪುತ್ತಿದೆ. ವಿದ್ಯಾರ್ಥಿಗಳಿಗೆ ಕಲಿಕೆಯ ಅವಕಾಶಗಳು ಹೆಚ್ಚಿ ಅವರು ಆತ್ಮವಿಶ್ವಾಸದಿಂದ ಹೊರಜಗತ್ತನ್ನು ಎದುರಿಸುವ ಸಾಮರ್ಥ್ಯ ಪಡೆಯುತ್ತಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ, ಹಳ್ಳಿಯ ಆಡಳಿತ ವ್ಯವಸ್ಥೆ ಮತ್ತು ಜನರ ಒಟ್ಟು ಜೀವನಮಟ್ಟ ಸುಧಾರಿತವಾಗಿರುವುದು ನಿಚ್ಚಳವಾಗಿ ಕಾಣಿಸುತ್ತಿದೆ. ಜೊತೆಗೆ ರಾಗಿಹಳ್ಳಿಯ ಪ್ರಯೋಗವು ಇತರ ಹಳ್ಳಿಗಳ ಜನರನ್ನೂ ಆಕರ್ಷಿಸಿರುವುದು ಇದರ ಒಟ್ಟು ಯಶಸ್ಸಿನ ದ್ಯೋತಕ.

ಸಂಸದರ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಹಳ್ಳಿಯ ಜನರ ಪಾಲುದಾರಿಕೆಯೇ ಅತ್ಯಂತ ಪ್ರಮುಖ ಅಂಶ. ರಾಗಿಹಳ್ಳಿಯ ಜನರು ಎಲ್ಲ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸಿರುವುದರಿಂದಲೇ ಇವೆಲ್ಲ ಸಾಧ್ಯವಾಗಿದೆ.

**ಕೆ. ಜನಾರ್ದನ ತುಂಗ**

# ರಾಷ್ಟ್ರನಿಷ್ಠೆಯ ಸಾಕಾರರೂಪ

ಪುಟ 2 ರಿಂದ

ವಿವಿಧ ಕ್ಷೇತ್ರದ ಪೂರ್ಣಾವಧಿ ಕಾರ್ಯಕರ್ತರ ಬೈಠಕ್ ಸಂದರ್ಭದಲ್ಲಿ ಸಂಘದ ಹಿರಿಯ ಪ್ರಚಾರಕರಾಗಿದ್ದ ಶ್ರೀ ಕೃ. ಸೂರ್ಯನಾರಾಯಣರಾಯರು ಅನಂತಕುಮಾರ್ ಅವರನ್ನು ಭಾಜಪದ ಸಂಘಟನೆಯ ಕೆಲಸಕ್ಕಾಗಿ ಕಳಿಸಿಕೊಡಲು ನಿರ್ಧರಿಸಲಾಗಿದೆ ಎಂದು ಘೋಷಿಸಿದರು. ಹೀಗಾಗಿ ಅಂದಿನಿಂದ ಭಾಜಪದ ಸಂಘಟನೆಯ ಕಾರ್ಯದಲ್ಲಿ ಅವರ ಯಾತ್ರೆ ಪ್ರಾರಂಭವಾಯಿತು.

ಭಾಜಪ ರಾಜಕೀಯವಾಗಿ ಬಹಳ ಕ್ಷೀಣ ಸ್ಥಿತಿಯಲ್ಲಿದ್ದ ಕಾಲ ಅದು. ಅದಕ್ಕಿಂತ ಮುಂಚೆ ಸಂಘಟನಾ ಕಾರ್ಯದರ್ಶಿಯಾಗಿದ್ದು ಸಂಘಟನೆಗೆ ಬಲ ತುಂಬಿದ್ದ ಶ್ರೀ ಭಾವೂರಾವ್ ದೇಶಪಾಂಡೆಯವರು ನಿಧನರಾಗಿದ್ದರು. ರಾಜ್ಯದ ವಿಧಾನಸಭೆಯಲ್ಲಿ ಇಬ್ಬರೇ ಸದಸ್ಯರಿದ್ದು ಅದರಲ್ಲೂ ಒಬ್ಬರು ಪಕ್ಷವನ್ನು ತ್ಯಜಿಸಿ ಹೋಗಿದ್ದರಿಂದ ಶ್ರೀ ಯಡಿಯೂರಪ್ಪನವರೊಬ್ಬರೇ ಸದಸ್ಯರಾಗಿ ಉಳಿದಿದ್ದರು. ಯಡಿಯೂರಪ್ಪ ಅನಂತಕುಮಾರರ ಜೋಡಿ ಪಕ್ಷದ ಸಂಘಟನೆಯನ್ನು ಪುನಃ ಸದೃಢಗೊಳಿಸುವ ಕೆಲಸದಲ್ಲಿ ಪ್ರಾಂತಾದ್ಯಂತ ಬಿರುಗಾಳಿಯ ಪ್ರವಾಸ ಆರಂಭಿಸಿದರು. ಅನಂತಕುಮಾರ್ ಅವರ ಸಂಘಟನಾ ಕೌಶಲ್ಯ, ಸಮಸ್ಯೆಗಳನ್ನು ಗುರುತಿಸಿ ಅವುಗಳ ವಿರುದ್ಧ ಹೋರಾಟವನ್ನು ರೂಪಿಸುವ ಕಾರ್ಯಶೈಲಿ, ಪ್ರತಿಯೊಬ್ಬ ಕಾರ್ಯಕರ್ತನ ಹೆಸರನ್ನೂ ನೆನಪಿಟ್ಟುಕೊಂಡು ಸಂಘಟನೆಯ ಕೆಲಸಕ್ಕೆ ಹುರಿದುಂಬಿಸುವ ವೈಖರಿ, ಎಲ್ಲವೂ ಒಟ್ಟುಗೂಡಿ ಸಂಘಟನೆಯ ವಿಸ್ತಾರಕ್ಕೆ ಆನೆಬಲವನ್ನು ತಂದುಕೊಟ್ಟವು. ಭಾಜಪ ದಿನದಿಂದ ದಿನಕ್ಕೆ ಬಲಿಷ್ಠವಾಗುತ್ತ ಪ್ರಬಲ ಶಕ್ತಿಯಾಗಿ ಹೊರಹೊಮ್ಮುವಲ್ಲಿ ಅನಂತಕುಮಾರ್ ಅವರದ್ದು ಮುಖ್ಯಪಾತ್ರ ಎನ್ನುವುದರಲ್ಲಿ ಸಂದೇಹವಿಲ್ಲ.

೧೯೯೬ ಲೋಕಸಭಾ ಚುನಾವಣೆಯಲ್ಲಿ ಮೊದಲಬಾರಿಗೆ ಅವರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ಅಲ್ಲಿಂದ ಅವರು ಸತತವಾಗಿ ೫ ಬಾರಿ ಲೋಕಸಭೆಗೆ ಆಯ್ಕೆಯಾದರು. ಕರ್ನಾಟಕದಿಂದ ಇಷ್ಟು ಬಾರಿ ಸತತವಾಗಿ ಸತತವಾಗಿ ಆಯ್ಕೆಯಾದ ಇನ್ನೊಬ್ಬ ಸದಸ್ಯರು ಬೇರೆ ಯಾರೂ ಇಲ್ಲವೆಂದು ಭಾವಿಸಿದ್ದೇನೆ. ಇಷ್ಟು ಬಾರಿ ಸತತವಾಗಿ ಆಯ್ಕೆಯಾಗಲು ಕಾರಣವಾಗಿದ್ದುದು ಜನರೊಂದಿಗೆ ಅವರು ಹೊಂದಿದ್ದ ಜೀವಂತ ಸಂಪರ್ಕ. ೧೯೯೮ರಲ್ಲಿ ೨ನೇ ಬಾರಿಗೆ ಆಯ್ಕೆಯಾದ ನಂತರ ಕೇಂದ್ರದಲ್ಲಿ ಮಂತ್ರಿಯೂ ಆದರು. ೨೦೦೪ರಿಂದ ೨೦೧೪ರ ವರೆಗೆ ವಿರೋಧ ಪಕ್ಷದಲ್ಲಿದ್ದಾಗ ಹಲವಾರು ಸಂಸದೀಯ ಸಮಿತಿಗಳಲ್ಲಿ ಸದಸ್ಯರಾಗಿ ಕೆಲಸ ಮಾಡಿದರು. ಪಕ್ಷದ ಸಂಘಟನೆಯ ಜವಾಬ್ದಾರಿ ಹೊತ್ತು ಕರ್ನಾಟಕವಷ್ಟೇ ಅಲ್ಲದೆ ವಿಭಿನ್ನ ಪ್ರಾಂತಗಳಲ್ಲಿ ಪಕ್ಷದ ಕಾರ್ಯದ ಹೊಣೆಯನ್ನು ನಿರ್ವಹಿಸಿದರು.

ಅವರು ಕೇಂದ್ರದ ಸಚಿವರಾಗಿದ್ದ ಅವಧಿಯಲ್ಲಿ ನನಗೆ ಅವರೊಂದಿಗೆ ನಿಕಟವಾದ ಒಡನಾಟದ ಅವಕಾಶ ಒದಗಿ ಬಂದದ್ದು ಎರಡು ಸಂದರ್ಭದಲ್ಲಿ. ಒಂದು ೨೦೦೦ದಲ್ಲಿ ಅವರು ಸಂಸ್ಕೃತಿ ಮಂತ್ರಾಲಯದ ವತಿಯಿಂದ ಆಯೋಜಿಸಿದ್ದ Reforms for Resurgent India ಎಂಬ ಜಿಜ್ಞಾಸಾ ಅಭಿಯಾನದ ಸಂದರ್ಭ. ಇನ್ನೊಂದು, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ದಕ್ಷಿಣ ಪ್ರಾದೇಶಿಕ ಕೇಂದ್ರದ ನಿರ್ವಹಣೆ.

ಅನಂತಕುಮಾರ್ ಕೇಂದ್ರದಲ್ಲಿ ಸಂಸ್ಕೃತಿ ವಿಭಾಗದ ಮಂತ್ರಿಯಾಗಿದ್ದಾಗ ಭಾರತದ ಗಣರಾಜ್ಯದ ೫೦ನೇ ವರ್ಷದ ಸಂದರ್ಭದಲ್ಲಿ ವಿಭಿನ್ನ ಕ್ಷೇತ್ರಗಳಲ್ಲಿ ಆಗಬೇಕಾದ ಬದಲಾವಣೆಗೆ ಸಂಬಂಧಿಸಿದಂತೆ ಚಿಂತನಗೋಷ್ಠಿಗಳನ್ನು ಆಯೋಜಿಸಿದರು. ಈ ಗೋಷ್ಠಿಗಳಿಗಾಗಿ ಆಯ್ದುಕೊಂಡ ವಿಷಯಗಳೆಂದರೆ, ಆರ್ಥಿಕ ಸುಧಾರಣೆ, ಆಡಳಿತ ಸುಧಾರಣೆ, ನ್ಯಾಯಾಂಗ ಸುಧಾರಣೆ ಮತ್ತು ಶೈಕ್ಷಣಿಕ ಸುಧಾರಣೆ. ಈ ಗೋಷ್ಠಿಗಳನ್ನು ಆಯೋಜಿಸುವ ಹಿನ್ನೆಲೆಯಲ್ಲಿ ಅವರ ಮನಸ್ಸಿನಲ್ಲಿದ್ದ ಚಿಂತನೆಯೆಂದರೆ ದೇಶ ರಾಜಕೀಯವಾಗಿ ಸ್ವಾತಂತ್ರ್ಯಗಳಿಸಿ ಹಲವು ದಶಕಗಳು ಕಳೆದಿದ್ದರೂ ನಾವು ಇನ್ನು ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಬ್ರಿಟಿಷರು ರೂಪಿಸಿದ ಮಾರ್ಗ, ವಿಧಾನಗಳನ್ನೇ ಅನುಸರಿಸುತ್ತಿದ್ದೇವೆ. ದೀರ್ಘಕಾಲದ ಇತಿಹಾಸ, ಗಹನವಾದ ತತ್ವಜ್ಞಾನ, ಚಿಂತನ ಪರ ಪರಂಪರೆಯನ್ನು ಹೊಂದಿರುವ ನಮ್ಮ ದೇಶ ನಮ್ಮ ಸಂಸ್ಕೃತಿ, ಜೀವನ ಮೌಲ್ಯಗಳಿಗೆ ಅನುರೂಪವಾದ ವ್ಯವಸ್ಥೆಗಳನ್ನು ರೂಪಿಸಲು ಸಾಧ್ಯವಾಗಿಲ್ಲ. ಈ ವಿಷಯಗಳನ್ನು ಕುರಿತು ಈಗಲಾದರೂ ಚಿಂತನೆ, ಜಿಜ್ಞಾಸೆ ಆಗಬೇಕೆನ್ನುವುದು ಅವರ ಮನೋಗತವಾಗಿತ್ತು. ಈ ವಿಭಿನ್ನ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ಕ್ಷೇತ್ರದ ತಜ್ಞರು, ವಿದ್ವಾಂಸರನ್ನು ಒಟ್ಟುಗೂಡಿಸಿ ಪರಿವರ್ತನೆಯ ಸ್ವರೂಪ ಕುರಿತು ಬೆಳಕನ್ನು ಚೆಲ್ಲುವಂತಾಗಬೇಕೆನ್ನುವುದು ಅವರ ಮನೋಗತವಾಗಿತ್ತು. ಈ ಚಿಂತನಗೋಷ್ಠಿಗಳ ಮಾಲಿಕೆಯಲ್ಲಿ ಶಿಕ್ಷಣವನ್ನು ಕುರಿತ ಗೋಷ್ಠಿಯ ಸಂಚಾಲಕನಾಗಿ ಕೆಲಸ ಮಾಡುವ ಅವಕಾಶ ನನ್ನ ಪಾಲಿಗೆ ಒದಗಿ ಬಂದಿತ್ತು. ಗೋಷ್ಠಿಗಳ ಕಲಾಪದ ಸ್ವರೂಪವಾಗಿ ಮೂಡಿಬಂದ ಸಲಹೆ, ಅನುಶಂಸೆಗಳನ್ನು ವರದಿಯ ರೂಪದಲ್ಲಿ ಸರಕಾರಕ್ಕೆ ಸಲ್ಲಿಸಲಾಯಿತು. ಕೇವಲ ತನ್ನ ಇಲಾಖೆಗೆ ಸಂಬಂಧಿಸಿದ ಆಡಳಿತದ ನಿರ್ವಹಣೆ, ಸಮಸ್ಯೆಗಳಷ್ಟಕ್ಕೆ ತನ್ನನ್ನು ತಾನು ಮಿತಿಗೊಳಿಸಿಕೊಳ್ಳದೆ ವಿಭಿನ್ನ ವಿಷಯಗಳಿಗೆ ಸಂಬಂಧಿಸಿದಂತೆ ದೇಶದ ಮುನ್ನಡೆ, ವ್ಯವಸ್ಥೆ ಯಾವ ರೀತಿಯಲ್ಲಿ ಆಗಬೇಕೆಂದು ಚಿಂತಿಸುವ ರಾಷ್ಟ್ರ ನಿರ್ಮಾಪಕನ ದೃಷ್ಟಿಕೋನ ಅವರು ಕೈಗೊಂಡ ಈ ಆಯೋಜನೆಯಲ್ಲಿ ಕಂಡುಬರುತ್ತದೆ.

ಅವರು ಕೈಗೊಂಡ ಮತ್ತೊಂದು ಮುಖ್ಯವಾದ ಕ್ರಮವೆಂದರೆ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ವ್ಯವಸ್ಥೆಯನ್ನು ಪುನಾರೂಪಿಸಿದ್ದು. ಈ ಕೇಂದ್ರ ಭಾರತೀಯ



ಕಲೆಗಳ ಸಂಶೋಧನಾತ್ಮಕ ಅಧ್ಯಯನಕ್ಕಾಗಿ ದೆಹಲಿಯಲ್ಲಿ ಸ್ಥಾಪಿಸಲಾಗಿದ್ದ ಕೇಂದ್ರ. ಇದರ ವಿಶ್ವಸ್ತ ಮಂಡಳಿಯ ಸದಸ್ಯರು ೨ ವರ್ಷಕ್ಕೊಮ್ಮೆ ೧/೩ರಷ್ಟು ಸಂಖ್ಯೆಯಲ್ಲಿ ನಿವೃತ್ತರಾಗಿ ಹೊಸ ಸದಸ್ಯರ ನೇಮಕವಾಗಬೇಕೆಂಬ ನಿಯಮವಿದ್ದರೂ ಆ ನಿಯಮವನ್ನು ಪಾಲಿಸದೇ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾದ ಕೆಲವೇ ಸದಸ್ಯರ ಹಿಡಿತದಲ್ಲಿ ಇರುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಶ್ರೀಮತಿ ಸೋನಿಯಾ ಗಾಂಧಿಯವರಿಗೆ ಭಾರತೀಯ ಕಲೆಗಳೊಂದಿಗೆ ಯಾವ ಸಂಬಂಧವಿತ್ತೋ ತಿಳಿಯದು, ಆ ಸಂಸ್ಥೆಗೆ ಅಧ್ಯಕ್ಷಿಣಿಯಾಗಿ ನೇಮಕಗೊಂಡಿದ್ದರು. ಅನಂತಕುಮಾರ್ ಅವರು ಸಂಸ್ಕೃತಿ ಇಲಾಖೆಯ ಸಚಿವರಾಗುತ್ತಿದ್ದಂತೆ ಸಂಸ್ಕೆಯ ವಿಶ್ವಸ್ತ ಮಂಡಳಿಯನ್ನೇ ವಿಸರ್ಜಿಸಿ ಖ್ಯಾತ ನ್ಯಾಯವಾದಿ ಎಲ್.ಎಂ. ಸಿಂಘ್ವಿಯವರ ನೇತೃತ್ವದಲ್ಲಿ ಹೊಸ ವಿಶ್ವಸ್ತಮಂಡಳಿಯನ್ನು ರಚಿಸಿದರು. ಬೆಂಗಳೂರು ವಿವಿ.ಯ ನಿವೃತ್ತ ಕುಲಪತಿಯಾಗಿದ್ದ ಶ್ರೀ ಎನ್.ಆರ್. ಶೆಟ್ಟಿಯವರನ್ನು ಸದಸ್ಯ ಕಾರ್ಯದರ್ಶಿಯಾಗಿ ನಿಯುಕ್ತಿ ಮಾಡಿದರು. ಬೆಂಗಳೂರು ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿ ಡಾ. ಹೆಚ್. ನರಸಿಂಹಯ್ಯನವರೂ ಮತ್ತೊಬ್ಬ ವಿಶ್ವಸ್ತರಾಗಿ ನೇಮಕಗೊಂಡಿದ್ದರು. ಪ್ರಭಾವೀ ಸಂಸ್ಥೆಯೊಂದರ ಸದಸ್ಯರಾಗಿದ್ದ ಪ್ರಬಲರು ಒಂದಿಷ್ಟು ಗಡಿಬಿಡಿ ಮಾಡಿದರೂ ಅದಕ್ಕೇನೂ ಸೊಪ್ಪು ಹಾಕಲಿಲ್ಲ. ಹೀಗೆ ಒಂದು ಪ್ರಭಾವೀ ಕುಟುಂಬದ ಹಿಡಿತಕ್ಕೆ ಒಳಪಟ್ಟಿದ್ದ ಸಾಂಸ್ಕೃತಿಕ ಅಧ್ಯಯನ ಕೇಂದ್ರವನ್ನು ಆ ಹಿಡಿತದಿಂದ ಮುಕ್ತಗೊಳಿಸಲಾಯಿತು.

ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಇಂತಹ ಸಾಂಸ್ಕೃತಿಕ ಅಧ್ಯಯನಕ್ಕೆ ಮೀಸಲಾದ ಸಂಸ್ಥೆಯ ಅವಶ್ಯಕತೆಯನ್ನು ಮನಗೊಂಡು ಶ್ರೀ ಅನಂತಕುಮಾರ್ ಅವರು ದಕ್ಷಿಣ ಭಾರತ ಕೇಂದ್ರವೊಂದನ್ನು ಬೆಂಗಳೂರಲ್ಲಿ ಸ್ಥಾಪಿಸಲು ಕ್ರಮ ಕೈಗೊಂಡರು. ಈ ಕೇಂದ್ರದ ಸಂಚಾಲಕನಾಗಿ ಕೆಲಸ ಮಾಡುವ ಅವಕಾಶ ನನಗೆ ಲಭ್ಯವಾಗಿತ್ತು. ಮಾನ್ಯ ಶತಾವಧಾನಿ ಡಾ. ಆರ್. ಗಣೇಶ್, ಡಾ. ಚೂಡಾಮಣಿ ನಂದಗೋಪಾಲ್ ಮುಂತಾದವರ ನೇತೃತ್ವದಲ್ಲಿ ಕಾರ್ಯಪ್ರವೃತ್ತವಾದ ಕೇಂದ್ರ ಮುಂದಿನ ನಾಲ್ಕು ವರ್ಷಗಳಲ್ಲಿ ಅತ್ಯಂತ ಸಮರ್ಥವಾಗಿ ತನ್ನ ಉದ್ದೇಶವನ್ನು ಸಫಲಗೊಳಿಸಿಕೊಂಡಿತ್ತು. ಬೆಂಗಳೂರಿನಲ್ಲಿ IGNCA ಪ್ರಾದೇಶಿಕ ಕೇಂದ್ರದ ಸ್ಥಾಪನೆ, ಸಾಂಸ್ಕೃತಿಕ ಅಧ್ಯಯನ ವಿಷಯದಲ್ಲಿ ಅವರ ಆಸಕ್ತಿ ಹಾಗೂ ಕಲ್ಪನಾಶೀಲತೆಗೆ ನಿದರ್ಶನವಾಗಿತ್ತು.

೨೦೦೪ರ ಚುನಾವಣೆಯಲ್ಲಿ ಪಕ್ಷದ ಸೋಲಿನಿಂದ ಅವರು ಅತಿಯಾಗಿ ಹತಪ್ರಭಗೊಂಡಿದ್ದರು. ಇದಕ್ಕೆ ಮುಖ್ಯ ಕಾರಣವೆಂದರೆ ಈ ಸೋಲು ಸರ್ವಥಾ ಅನಿರೀಕ್ಷಿತವಾಗಿತ್ತು. ಚುನಾವಣೆಗೆ ಕೆಲವು ತಿಂಗಳುಗಳ ಮುಂಚೆ ತುಂಬು ಉತ್ಸಾಹ, ಆತ್ಮವಿಶ್ವಾಸದಿಂದ ಅವರು ಹೇಳಿದ್ದರು "ವಾಜಪೇಯಿಯವರ ಜನಪ್ರಿಯತೆ ಮುಗಿಲೆತ್ತರದಲ್ಲಿದೆ. ಅವರಿಗೆ ಸರಿಸಾಟಿಯಾಗುವ ಯಾವುದೇ ನಾಯಕರು ವಿಪಕ್ಷದಲ್ಲಿಲ್ಲ. ಆದ್ದರಿಂದ ನಮ್ಮ ಗೆಲುವಿನ ವಿಷಯದಲ್ಲಿ ಯಾವುದೇ ಸಂಶಯಕ್ಕೆ ಕಾರಣವಿಲ್ಲ" ಎಂದಿದ್ದರು. ಆದರೆ ಆ ಸಂದರ್ಭದಲ್ಲಿ ನಾನೇ, 'ಪರಿಸ್ಥಿತಿ ನೀವು ನಂಬಿಕೊಂಡಿರುವಷ್ಟು ಅನುಕೂಲಕರವಾಗಿಲ್ಲ, ಅನೇಕ ವಿಷಯಗಳ ಕಡೆ ಎಚ್ಚರ ವಹಿಸಬೇಕಾದದ್ದಿದೆ' ಎಂದು ಎಚ್ಚರಿಸಿದ್ದೆ. ಚುನಾವಣೆಯ ಫಲಿತಾಂಶ ಬಂದು ಪಕ್ಷಕ್ಕೆ ಹಿನ್ನಡೆಯಾದಾಗ ಅವರು ಅತಿಯಾಗಿ ಘಾಸಿಗೊಂಡರು. ಮನಸ್ಸಿಗೆ ನೆಮ್ಮದಿಯನ್ನು ಪಡೆಯಲು ಶೃಂಗೇರಿಯ ಜಗದ್ಗುರುಗಳನ್ನು ಭೇಟಿಯಾಗುವ ಯೋಚನೆ ಮಾಡಿದರು. ಅನಂತಕುಮಾರ್, ತೇಜಸ್ವಿನಿ, ಮತ್ತು ನಾನು ಜಗದ್ಗುರುಗಳ ದರ್ಶನಕ್ಕೆಂದು ಶೃಂಗೇರಿಗೆ ತೆರಳಿದೆವು. ಗುರುಗಳ ದರ್ಶನವಾಯಿತು. ಗುರುಗಳೆದುರು ತಮ್ಮ ಮನಸ್ಸಿನ ದುಗುಡವನ್ನು ತೆರೆದಿಟ್ಟಾಗ ಗುರುಗಳು ನಸುನಗುತ್ತ ಹೇಳಿದರು "ಕಷ್ಟ, ಕ್ಲಿಷ್ಟ ಪರಿಸ್ಥಿತಿಗಳು ಯಾರಿಗೆ ತಾನೇ ಬಂದಿಲ್ಲ. ಭಗವಂತನ ಅವತಾರವೆಂದು ನಾವು ಪರಿಗಣಿಸುವ ಶ್ರೀರಾಮನೇ ವನವಾಸದ ಸಂಕಷ್ಟವನ್ನು ಅನುಭವಿಸಬೇಕಾಗಿ ಬರಲಿಲ್ಲವೇ, ತಾತ್ಕಾಲಿಕ ಸೋಲು, ಹಿನ್ನಡೆಗೆಲ್ಲ ಧೃತಿಗೆಡುವುದು ಸಲ್ಲದು. ನಮ್ಮ ಅನುಗ್ರಹವಿದೆ, ಮುಂದೆ ಒಳ್ಳೆಯ ದಿನಗಳೂ ಬರಲಿವೆ, ಚಿಂತೆ ಬೇಡ' ಎಂದು ಹೇಳಿ ಆಶೀರ್ವದಿಸಿದರು. ಗುರುಗಳ ದರ್ಶನ, ಅವರ ಅನುಗ್ರಹದ ನುಡಿಗಳಿಂದ ಹೊಸ ಉತ್ಸಾಹ, ಶಕ್ತಿಯನ್ನು ಅವರು ಪಡೆದುಕೊಂಡರು.

ಅದೇ ಸಮಯದಲ್ಲಿ ಖ್ಯಾತ ಗಣಪತಿ ಆರಾಧಕರೂ ವಿದ್ವಾಂಸರೂ ಆದ ಶ್ರೀ ಬೊಮ್ಮಲಾಪುರದ ಶ್ರೀ ನಂಜುಂಡ ಭಟ್ಟರನ್ನು

ಪುಟ 7 ರಲ್ಲಿ ಮುಂದುವರೆದಿದೆ

# ಸುಗಮ ಸಂಚಾರವ್ಯವಸ್ಥೆಗೆ ಮೆಟ್ರೋ ಪರಿಹಾರ

ಗುಡ್ಡು ಶಾಸ್ತ್ರಿ ಇನಾಂದಾರ್
ಅನಂತಕುಮಾರರ ಸಹವರ್ತಿ ಮತ್ತು ಸಾಮಾಜಿಕ ಕಾರ್ಯಕರ್ತರು

ನಗರೀಕರಣ ಜಾಸ್ತಿಯಾಗುತ್ತಿರುವಂತೆ ಜನರು ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುತ್ತಾರೆ. ನಗರದಲ್ಲಿ ಅವರು ಕೆಲಸ ಮಾಡುವ ಜಾಗವು ವಾಸ ಮಾಡುವ ಜಾಗದಿಂದ ಬಹಳ ದೂರವಿರುವುದರಿಂದ ನಗರದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಪ್ರತಿನಿತ್ಯ ಪ್ರಯಾಣಿಸಬೇಕಾಗುತ್ತದೆ. ಹೀಗಾಗಿ ಸಂಚಾರ ವ್ಯವಸ್ಥೆಯ ಮೇಲೆ ವಿಪರೀತವಾದ ಒತ್ತಡ ಬೀಳುತ್ತದೆ. ಸಮಯಕ್ಕೆ ಸರಿಯಾಗಿ ಕೆಲಸಗಳಿಗೆ ತಲುಪಲು ಸಾಧ್ಯವಾಗದೆ ಅವರ ಕೆಲಸದ ಗುಣಮಟ್ಟದ ಮೇಲೆ ಪ್ರಭಾವ ಉಂಟಾಗುತ್ತದೆ. ಇಂತಹ ಪರಿಸ್ಥಿತಿಯನ್ನು ಎಲ್ಲ ನಗರಗಳಲ್ಲಿ ನಾವು ಕಾಣುತ್ತಿದ್ದೇವೆ.

**ಕರಾರುವಾಕ್ಕಾದ ಸಂಚಾರ**

ಈ ಸಮಸ್ಯೆಗೆ ಮೆಟ್ರೋ ಮತ್ತು ಸಬರ್ಬನ್ ರೈಲುಗಳು ಪರಿಹಾರ ಕೊಡುವಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಸಬರ್ಬನ್ ರೈಲ್ವೇ ನಮ್ಮ ದೇಶದಲ್ಲಿ **1853** ರಲ್ಲೇ ಶುರುವಾಗಿದೆ. ಈಗ ಮೆಟ್ರೋ ರೈಲು ಎನ್ನುವ ನಗರ ಸಾರಿಗೆ ವ್ಯವಸ್ಥೆ ಎಲ್ಲ ಮಹಾನಗರಗಳಲ್ಲಿ ಪ್ರಚಲಿತವಾಗಿದೆ. ಭೂಗರ್ಭದಲ್ಲಿ, ನೆಲಮಟ್ಟದಲ್ಲಿ ಮತ್ತು



ಎತ್ತರಿಸಿದ ಹಳಿಗಳ ಮೇಲೆ - ಹೀಗೆ ಮೂರು ಮಟ್ಟಗಳಲ್ಲಿ ಮೆಟ್ರೋ ರೈಲು ಸಂಚರಿಸುತ್ತದೆ. ಕರಾರುವಾಕ್ಕಾದ ಸಮಯ ಪಾಲನೆ ಮೆಟ್ರೋ ರೈಲುಗಳ ವಿಶೇಷತೆ. ದೇಶದ **13** ನಗರಗಳಲ್ಲಿ ಈಗಾಗಲೇ ಮೆಟ್ರೋ ರೈಲುಗಳ ಸೇವೆ ಚಾಲನೆಯಲ್ಲಿದೆ. ಇತರ **7** ನಗರಗಳಲ್ಲಿ ಮೆಟ್ರೋ ನಿರ್ಮಾಣ ಹಂತದಲ್ಲಿದೆ.

ಬೆಂಗಳೂರು ನಗರದಲ್ಲಿ ಪ್ರತಿದಿನ ಸುಮಾರು ನಾಲ್ಕೂವರೆ ಲಕ್ಷ ಜನರು ಮೆಟ್ರೋ ರೈಲುಗಳ ಮೂಲಕ ಪ್ರಯಾಣ ಮಾಡುತ್ತಿದ್ದಾರೆ. ಅತ್ಯಂತ ಕಡಿಮೆ ಸಮಯ, ಅತ್ಯಂತ ಕಡಿಮೆ ವೆಚ್ಚ ಅತ್ಯಂತ ಕಡಿಮೆ ಪರಿಸರ ಮಾಲಿನ್ಯ, ಸುಖವಾದ ಪ್ರಯಾಣ ಇವೆಲ್ಲವೂ ಮೆಟ್ರೋದಿಂದ ಸಾಧ್ಯವಾಗುತ್ತಿದೆ.

**ಜನಪ್ರತಿನಿಧಿಯ ದೂರದರ್ಶಿತ್ವ**

ನಗರವೊಂದಕ್ಕೆ ಇಂತಹ ಮೆಟ್ರೋ ವ್ಯವಸ್ಥೆಯನ್ನು ಕಲ್ಪಿಸಲು ದೂರದರ್ಶಿತ್ವ ಹೊಂದಿದ ಜನಪ್ರತಿನಿಧಿಗಳು ನಗರದಲ್ಲಿರಬೇಕು. ಬೆಂಗಳೂರು ನಿರಂತರವಾಗಿ ಬೆಳೆಯುತ್ತಿರುವ ನಗರ. ಇಂತಹ ನಗರಕ್ಕೆ ಮುಂದೆ ಹತ್ತು ವರ್ಷಗಳ ನಂತರ, ಇಪ್ಪತ್ತು ವರ್ಷಗಳ ನಂತರ ಯಾವ ರೀತಿಯ ಸಂಚಾರ ವ್ಯವಸ್ಥೆ ಬೇಕಾಗಬಹುದೆಂದು ಅಧಿಕಾರದಲ್ಲಿರುವವರು, ಅವರ ಮೇಲೆ ಪ್ರಭಾವ ಬೀರಬಲ್ಲವರು, ಯೋಜನಾ ತಜ್ಞರು ಊಹಿಸಿ ಕಾರ್ಯಪ್ರವೃತ್ತರಾಗಬೇಕು. ಈ ನಿಟ್ಟಿನಲ್ಲಿ ನೋಡಿದಾಗ, ಅಂದಿನ ದಿನಗಳಲ್ಲಿ ಸಂಸತ್ತಿನಲ್ಲಿ ತಮ್ಮ ಪ್ರತಿನಿಧಿಯನ್ನಾಗಿ ಅನಂತಕುಮಾರರನ್ನು ಆರಿಸಿದ ಬೆಂಗಳೂರಿನ ಜನರನ್ನು ಅಭಿನಂದಿಸಲೇಬೇಕು. ನಾಲ್ಕೂವರೆ ಲಕ್ಷದಷ್ಟು ಜನರು ಇಂದು ಮೆಟ್ರೋ ರೈಲುಗಳ ಮೂಲಕ ಪ್ರತಿನಿತ್ಯ ಪ್ರಯಾಣಿಸಬಹುದೆಂಬುದನ್ನು ಮಾನ್ಯ ಅನಂತಕುಮಾರರು **2001** ರಲ್ಲಿಯೇ ಮನಗಂಡಿದ್ದರು. ಕೇಂದ್ರ ಮತ್ತು ರಾಜ್ಯ ಸರಕಾರಗಳ ಜಂಟೀ ಪ್ರಾಯೋಜಕತ್ವದಲ್ಲಿ ಇದನ್ನು ಸಾಕಾರಗೊಳಿಸಲು ತತ್ ಕ್ಷಣವೇ ಕಾರ್ಯಪ್ರವೃತ್ತರಾದರು. ಈ ಬೃಹತ್ ಯೋಜನೆಗೆ ಬೇಕಾಗುವ ಸಾವಿರಾರು ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಮಾರ್ಗವನ್ನೂ ಅವರು ಕಂಡುಕೊಂಡಿದ್ದರು.



**ಯೋಜನೆಗೆ ನಿಧಿಸಂಗ್ರಹ**

ಅದರಂತೆ ಬೆಂಗಳೂರು ಮತ್ತು ಸಮೀಪದ ಪ್ರದೇಶಗಳಲ್ಲಿ ಮಾರಾಟವಾಗುವ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಪ್ರತಿ ಲೀಟರಿಗೆ ಒಂದು ರೂಪಾಯಿ ಪ್ರತ್ಯೇಕ ಕರ ವಿಧಿಸಿ ಅದನ್ನು ಮೆಟ್ರೋ ನಿರ್ಮಾಣಕ್ಕಾಗಿ ತೆಗೆದಿರಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. ಮೆಟ್ರೋಮ್ಯಾನ್ ಎಂದೇ ಖ್ಯಾತಿವೆತ್ತ ಶ್ರೀ ಇ ಶ್ರೀಧರನ್ ಅವರ ನಿರ್ದೇಶನದಲ್ಲಿ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಅದಕ್ಕೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆಯನ್ನೂ ಅನಂತಕುಮಾರರು ಪಡೆದರು. ಅವರ ಸತತ ಪ್ರಯತ್ನಗಳ ಮೂಲಕ ಸಾಕಾರಗೊಂಡ ನಮ್ಮ ಮೆಟ್ರೋ ರೈಲು ಸಾರಿಗೆ ಬೆಂಗಳೂರಿಗರ ಹೆಮ್ಮೆಯಾಗಿದೆ.

**ಉತ್ತಮ ಭವಿಷ್ಯಕ್ಕೆ ಕಾರ್ಯಯೋಜನೆ**

ಮೆಟ್ರೋ ರೈಲಿನ ಜೊತೆಜೊತೆಗೆ ಬೆಂಗಳೂರಿನ ಎಲ್ಲ ರೈಲು ಮಾರ್ಗಗಳನ್ನೂ ಪರಸ್ಪರ ಜೋಡಿಸಿ ಒಂದು ಸುವ್ಯವಸ್ಥಿತವಾದ ಅರ್ಬನ್ ರೈಲು ವ್ಯವಸ್ಥೆಯನ್ನು ಕಲ್ಪಿಸಬೇಕೆಂಬ ಕನಸನ್ನೂ ಅನಂತಕುಮಾರರು ಕಂಡಿದ್ದರು. ಈ ನಿಟ್ಟಿನಲ್ಲಿ ರೈಲ್ವೇ ಇಲಾಖೆಯು ಕಾರ್ಯಪ್ರವೃತ್ತವಾಗಿದ್ದು ಸಾಕಷ್ಟು ಪ್ರಗತಿ ಉಂಟಾಗಿದೆ.

ಜನನಾಯಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರದ ಜನರ ಸದ್ಯದ ಅವಶ್ಯಕತೆಗಳ ಬಗ್ಗೆ ಗಮನ ಹರಿಸಿದರೆ ಸಾಲದು. ತಮ್ಮ ಕ್ಷೇತ್ರವು ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಕಾಣಬಹುದೆಂದು ಊಹಿಸಿ ಅಂದಿಗೆ ಬೇಕಾಗುವ ವ್ಯವಸ್ಥೆಗಳನ್ನು ನಿರ್ಮಾಣ ಮಾಡಲು ಈಗಲೇ ತೊಡಗಿಕೊಳ್ಳುವ ದೂರದರ್ಶಿಗಳಾಗಿಯೂ ಇರಬೇಕು. ಆಗ ಮಾತ್ರ ಪ್ರತಿಯೊಂದು ಯೋಜನೆಯೂ ಜನಸ್ನೇಹಿಯಾಗಿ ರೂಪುಗೊಳ್ಳುತ್ತದೆ.

ಇಂದು ನಾಲ್ಕೂವರೆ ಲಕ್ಷ ಜನರು ನಗರದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚಾರ ಮಾಡುತ್ತ ತಮ್ಮ ಜೀವನ ನಿರ್ವಹಣೆಯನ್ನು ಸುಗಮಮಾಡಿಕೊಳ್ಳಲು ನೆರವಾಗಿರುವ ಮೆಟ್ರೋ ಸಾರಿಗೆ ವ್ಯವಸ್ಥೆಯ ಕನಸು ಕಂಡು ಅದರ ವಿಸ್ತೃತ ಯೋಜನೆಯನ್ನು ತಯಾರಿಸಿ ಸಾಕಾರಗೊಳಿಸಲು ದಶಕಗಳ ಕಾಲ ಕೆಲಸ ಮಾಡುವುದೂ ಒಂದು ಮಹತ್ತರವಾದ ಜನಸೇವೆ. ಇಂತಹುದೊಂದು ಜನೋಪಯೋಗಿ ಸೇವೆಯ ಕನಸು ಕಂಡು ಅದನ್ನು ಸಾಕಾರಗೊಳಿಸಲು ನಿರಂತರವಾಗಿ ಶ್ರಮಿಸಿದ ಅನಂತಕುಮಾರರು ನಿತ್ಯಸ್ಮರಣೀಯರೇ ನಿಜ.

(ಸೌಜನ್ಯ: ಆಕಾಶವಾಣಿ, ಮೈಸೂರು)

# ರಾಷ್ಟ್ರನಿಷ್ಠೆಯ ಸಾಕಾರರೂಪ

ಪುಟ 6 ರಿಂದ

ಭೇಟಿಯಾಗಿದ್ದಾಯಿತು. ಅವರೂ ಸಹ ಭವಿಷ್ಯದ ಕುರಿತಾಗಿ ಭರವಸೆಯನ್ನು ತುಂಬಿ ತಾನು ಸ್ವತಃ ಬಂದು ಅನಂತಕುಮಾರರ ಮನೆಯಲ್ಲಿ ಆರಾಧನೆಯ ಕಾರ್ಯವನ್ನು ನಿರ್ವಹಿಸಿಕೊಡುವುದಾಗಿ ಹೇಳಿದರು. ಶ್ರೀ ಗುರುಗಳ ಹಾಗೂ ಖ್ಯಾತ ದೈವೀ ಆರಾಧಕರ ದರ್ಶನ, ಧೈರ್ಯತುಂಬುವ ಮಾತುಗಳಿಂದ ಹೊಸ ಚೈತನ್ಯಪಡೆದ ಅನಂತಕುಮಾರ್ ಮೊದಲಿನಂತೆಯೇ ಉತ್ಸಾಹದಿಂದ ಕಾರ್ಯರಂಗಕ್ಕೆ ಧುಮುಕಿದರು. ಮುಂದಿನ ಚುನಾವಣೆಗಳಲ್ಲಿಯೂ ಸತತವಾಗಿ ಜಯಗಳಿಸಿ ಸರ್ಕಾರದಲ್ಲಿ ಪ್ರಮುಖವಾದ ಜವಾಬ್ದಾರಿಗಳನ್ನು ನಿರ್ವಹಿಸಿದರು.

ಅನಂತಕುಮಾರರ ಜೀವನದಲ್ಲಿ ಉದ್ದಕ್ಕೂ ಕಾಣಬರುವ ಗುಣಗಳೆಂದರೆ ಅವರ ನಿರಂತರ ಕ್ರಿಯಾಶೀಲತೆ. ಪಕ್ಷಭೇದವನ್ನು ಲೆಕ್ಕಿಸದೆ ಎಲ್ಲರಿಗೂ ಅವರ ಸ್ವಂತದ ಕಾರ್ಯವಿರಲಿ, ವ್ಯಾಪಕ ಜನಹಿತಕ್ಕೆ ಸಂಬಂಧಪಟ್ಟ ಕೆಲಸವಿರಲಿ ಸಹಾಯಹಸ್ತ ಚಾಚುವ ಮನೋಭಾವ, ವ್ಯಾಪಕ ಜನಹಿತವನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡುವ ಉದಾತ್ತ ದೃಷ್ಟಿಕೋಣ, ತತ್ಕ್ಷಣದ ರಾಜಕೀಯ ಒತ್ತಡಗಳನ್ನು, ಸಂಕುಚಿತ ಹಿತಾಸಕ್ತಿಗಳನ್ನು ಮೀರಿ, ಸಮಷ್ಟಿ ಹಿತವನ್ನೇ ಕುರಿತು ಚಿಂತಿಸುವ ಮನೋಭಾವ ಇತ್ಯಾದಿ, ರಾಜಕಾರಣಿ ಮುಂದಿನ ಚುನಾವಣೆಯನ್ನು ಕುರಿತು ಯೋಚಿಸುತ್ತಾನೆ, ರಾಷ್ಟ್ರನಾಯಕ ಮುಂದಿನ ಪೀಳಿಗೆಯನ್ನು ಕುರಿತು ಯೋಚಿಸುತ್ತಾನೆ ಎನ್ನುವ ನಾಣ್ಣುಡಿಯೊಂದಿದೆ. ಅನಂತಕುಮಾರ್ ಎರಡನೆಯ ಗುಂಪಿಗೆ ಸೇರಿದ ವ್ಯಕ್ತಿತ್ವವನ್ನು ಹೊಂದಿದವರು ಎಂದು ನಿಶ್ಚಿತವಾಗಿ ಹೇಳಬಹುದು.

ಬರಲಿರುವ ದಿನಗಳಲ್ಲಿ, ಮುಂದಿನ ಜನ್ಮದಲ್ಲಿ ಅವರು ಇನ್ನೂ ಮಹತ್ವದ ಪಾತ್ರವಹಿಸಬೇಕಾದದ್ದಿದೆ ಎಂಬ ಕಾರಣದಿಂದ ಭಗವಂತ ಅವರನ್ನು ಮುಂಚಿತವಾಗಿಯೇ ಕರೆಸಿಕೊಂಡಿರಬೇಕೆಂದು ಭಾವಿಸುತ್ತೇನೆ. ಮುಹೂರ್ತಂ ಜ್ವಲಿತಂ ಶ್ರೇಯಂ ನಚ ಧೂಮ್ರಾಯಿತಮ್ ಚಿರಂ ಎನ್ನುವ ಸೂಕ್ತಿಯೊಂದಿದೆ. 'ದೀರ್ಘಕಾಲ ಹೊಗೆಯಾಗಿ ಇರುವುದಕ್ಕಿಂತ ಕ್ಷಣಕಾಲ ಬೆಳಗಿ ಹೋಗುವುದು ಶ್ರೇಯಸ್ಕರವಾದದ್ದು' ಎಂದರ್ಥ. ಪ್ರಖರ ಜ್ವಾಲೆಯಂತೆ ಬೆಳಗಿದ ಜೀವನ ಅವರದು ಎನ್ನುವುದರಲ್ಲಿ ಸಂಶಯವಿಲ್ಲ.

# ಭಾರತದ ಔಷಧ ವಲಯದ ಸವಾಲುಗಳು

ಡಾ. ಮಂದಾರ ಕೋಡಗುಲೆ
ಸಿ ಇ ಒ, ಫಾರ್ಮಾ ಪ್ರೈ.ಲಿ. ನವ ಮುಂಬಯಿ

ಭಾರತದ ಔಷಧ ವಲಯವನ್ನು ಜಾಗತಿಕ ಔಷಧ ಉತ್ಪಾದನಾ ಕೇಂದ್ರವೆಂದು ನಿಸ್ಸಂದೇಹವಾಗಿ ಪರಿಗಣಿಸಬಹುದು. ಇಂದು ನಮ್ಮ ದೇಶವು ಸಾರ್ವತ್ರಿಕ ( ಜೆನೆರಿಕ್) ಔಷಧಗಳ ಉತ್ಪಾದನೆಯಲ್ಲಿ ಮೊದಲನೆಯ ಸ್ಥಾನದಲ್ಲಿದ್ದು ಜಗತ್ತಿನ ಶೇ 46 ರಿಂದ 49 ರಷ್ಟು ಔಷಧಗಳನ್ನು ಭಾರತವೇ ಸರಬರಾಜು ಮಾಡುತ್ತಿರುವುದು ಗಮನಾರ್ಹ. ಸಗಟು ಔಷಧಗಳಲ್ಲಿನ ಸಕ್ರಿಯ ಔಷಧ ಘಟಕಗಳನ್ನು (API) ಪರಿಗಣಿಸಿದರೆ ಭಾರತವು ಯೂರೋಪು ಮತ್ತು ಚೀನಾ ದೇಶಗಳ ನಂತರ ಮೂರನೆಯ ಸ್ಥಾನದಲ್ಲಿದೆ.

**ಆರ್ಥಿಕತೆಯಲ್ಲಿ ಔಷಧ ವಲಯದ ಸ್ಥಾನ**

ಔಷಧ ವಲಯದಲ್ಲಿ ನಡೆಯುತ್ತಿರುವ ಚಟುವಟಿಕೆಗಳಲ್ಲಿ ಸಕ್ರಿಯ ಘಟಕಗಳು ಮತ್ತು ಸಿದ್ಧ ಉತ್ಪನ್ನಗಳನ್ನು ಹೊರತು ಪಡಿಸಿದರೆ ಭಾರತವು ಸಂಶೋಧನೆ ಮತ್ತು ಉತ್ಪಾದನೆಯ ಗುತ್ತಿಗೆ (CRAM) ಹಾಗೂ ಅಭಿವೃದ್ಧಿ ಮತ್ತು ಉತ್ಪಾದನೆಯ ಗುತ್ತಿಗೆಯ (CDMO) ಕ್ಷೇತ್ರದಲ್ಲಿಯೂ ಅಗ್ರ ಸ್ಥಾನದಲ್ಲಿದೆ. ಈ ಎರಡೂ ಗುತ್ತಿಗೆ ವಲಯಗಳು ನಮ್ಮ ದೇಶದಲ್ಲಿ ಬೃಹತ್ಪ್ರಮಾಣದ ಉದ್ದಿಮೆಗಳಾಗಿವೆ. ಸಂಶೋಧನೆ ಗುತ್ತಿಗೆಯ ಮೂಲಕ ನಮ್ಮ ದೇಶವು ವಾರ್ಷಿಕ 30 ಕೋಟಿ ಡಾಲರುಗಳ ಆದಾಯವನ್ನು ಗಳಿಸುತ್ತಿದ್ದು, ಉತ್ಪಾದನೆ ಗುತ್ತಿಗೆಯ ಮೂಲಕ 3000 ಕೋಟಿ ಡಾಲರುಗಳ ಆದಾಯವನ್ನು ಗಳಿಸುತ್ತಿದೆ. ಹೀಗಾಗಿ ಔಷಧ ವಲಯವು ದೇಶದ ಅತ್ಯಂತ ದೊಡ್ಡ ಕೈಗಾರಿಕೆಗಳಲ್ಲಿ ಒಂದಾಗಿದೆ. ಜೈವಿಕ ತಂತ್ರಜ್ಞಾನ ಮತ್ತು ಜೈವಿಕ ಅನುಕರಣೆ (Bio Tech and Bio Similus)ಗಳಿಗೆ ಸಂಬಂಧಿಸಿದಂತೆ (ಪ್ರೋಟೀನ್ ಮತ್ತು ಪೆಪ್ಟೈಡ್ ಅಣುಗಳ ವಿಷಯದಲ್ಲಿ ನಮ್ಮದು ಮುಂಚೂಣಿ ದೇಶವಲ್ಲದಿದ್ದರೂ) ಲಸಿಕೆಗಳ ತಯಾರಿಕೆಯಲ್ಲಿ ನಾವು ಜಗತ್ತಿನ ಒಟ್ಟು ಲಸಿಕೆಗಳ ಶೇ 60 ರಷ್ಟು ಉತ್ಪಾದನೆ ಮಾಡುವ ಮೂಲಕ ಅಗ್ರ ಸ್ಥಾನದಲ್ಲಿದ್ದೇವೆ. ಬಯೋಲಾಜಿಕಲ್-ಇ, ಡಾ. ರೆಡ್ಡೀಸ್, ಬಯೋಕಾನ್, ಭಾರತ್ ಸಿರಂ, ಭಾರತ್ ಬಯೋಟೆಕ್ ಮುಂತಾದ ಕಂಪೆನಿಗಳು ಈ ದಿಸೆಯಲ್ಲಿ ಗಣನೀಯ ಪ್ರಮಾಣದ ಕೆಲಸ ಮಾಡುತ್ತಿವೆ. ಆಫ್ರಿಕಾ, ಏಷಿಯಾ, ಅಮೇರಿಕ ಮತ್ತು ಯೂರೋಪ್ ಸೇರಿದಂತೆ ಜಗತ್ತಿನ ಬಹುಪಾಲು ದೇಶಗಳು ತಮ್ಮ ವೈದ್ಯಕೀಯ ಸಾಮಗ್ರಿಗಳು ಮತ್ತು ಔಷಧಗಳಿಗಾಗಿ ನಮ್ಮ ದೇಶವನ್ನು ಅವಲಂಬಿಸಿವೆ ಎನ್ನುವುದು ನಮಗೆಲ್ಲರಿಗೂ ಹೆಮ್ಮೆ ತರುವ ವಿಷಯವಾಗಿದೆ.



**ಸಮಸ್ಯೆಗಳು**

ನಮ್ಮ ದೇಶವು ಜಗತ್ತಿನ ಔಷಧ ಕೇಂದ್ರವಾಗಿದ್ದರೂ ಕೂಡ ಔಷಧ ತಯಾರಿಕೆಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಗಳು, ಪ್ಯಾಕೇಜಿಂಗ್ ಸಾಮಗ್ರಿಗಳು ಮತ್ತು ಔಷಧಗಳಲ್ಲಿ ಬಳಸುವ ಪೂರಕ ಘಟಕಗಳ (excipients) ವಿಷಯದಲ್ಲಿ ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದೆ. ಸಗಟು ಔಷಧ ತಯಾರಿಕೆಯಲ್ಲಿ ಪ್ರಮುಖವಾಗಿರುವ ಸಕ್ರಿಯ ಔಷಧ ಘಟಕಗಳ (API) ಮತ್ತು ಮಧ್ಯವರ್ತಿಗಳ ವಿಷಯದಲ್ಲಿ ನಮ್ಮ ದೇಶವು ಚೀನಾ ದೇಶವನ್ನು ಅತಿಯಾಗಿ ಅವಲಂಬಿಸಿದೆ. ಇದರ ಜೊತೆಗೆ ಪೂರಕ ಘಟಕಗಳು, ಪ್ಯಾಕೇಜಿಂಗ್ ಸಾಮಗ್ರಿಗಳು ಮತ್ತು ಉತ್ತಮ ಗುಣ ಮಟ್ಟದ ಔಷಧ ತಯಾರಿಕೆಗೆ ಅಗತ್ಯವಿರುವ ಯಂತ್ರಗಳಿಗಾಗಿ ನಾವು ಅಮೆರಿಕ, ಯೂರೋಪ್, ಚೀನಾ ಮತ್ತಿತರ ಕೆಲವು ದೇಶಗಳನ್ನು ಅವಲಂಬಿಸಿದ್ದೇವೆ. ದೇಶದಲ್ಲಿ ಕೊರೋನಾ ಸಾಂಕ್ರಾಮಿಕ ರೋಗವು ತಾಂಡವವಾಡುತ್ತಿರುವಾಗ ಸರಬರಾಜು ಸರಪಳಿಗಳಲ್ಲಿ ವ್ಯತ್ಯಾಸವುಂಟಾಗಿ ಅಗತ್ಯ ಔಷಧಗಳನ್ನು ಸಕಾಲಕ್ಕೆ ಒದಗಿಸಲು ಬಹಳ ಸಮಸ್ಯೆ ಉಂಟಾಯಿತು. ಪ್ಯಾರಾಸಿಟಮಾಲ್ ನಂತಹ ಅಗತ್ಯ ಔಷಧಗಳ ಸಕ್ರಿಯ ಔಷಧ ಘಟಕಕ್ಕೂ ನಾವು ಚೀನಾ ದೇಶದ ಮಧ್ಯವರ್ತಿಗಳನ್ನು ಅವಲಂಬಿಸಿರುವುದು ನಮ್ಮ ದೊಡ್ಡ ಸಮಸ್ಯೆ.

ನಮ್ಮ ಎರಡನೆಯ ದೊಡ್ಡ ಸಮಸ್ಯೆ, ನಮ್ಮಲ್ಲಿ ಸರಿಯಾದ ವಿತರಣಾ ವ್ಯವಸ್ಥೆಯಿಲ್ಲದಿರುವುದು. ಸರಕಾರವು ಪ್ರಾರಂಭಿಸಿರುವ ಜನೌಷಧಿ ಯೋಜನೆಯು ಒಂದು ಉತ್ತಮ ಉಪಕ್ರಮವಾಗಿದ್ದರೂ ವಿತರಣಾ ವ್ಯವಸ್ಥೆಯಲ್ಲಿ ಇನ್ನೂ ಅನೇಕ ಸುಧಾರಣೆ ಆಗಬೇಕಾಗಿದೆ. ಮುಂದುವರಿದ

ಪುಟ 9 ರಲ್ಲಿ ಮುಂದುವರೆದಿದೆ

# ಪಾರಂಪರಿಕ ಜ್ಞಾನದ ಬೆಳಕಿನಲ್ಲಿ ಪರಿಸರದ ರಕ್ಷಣೆ

ಪುಟ 3 ರಿಂದ

ನಂತರ ಹೂವುಗಳ ಹೆಸರುಗಳು; ಚಂಪಕ, ಗಿರಿಮಲ್ಲಿಕಾ, ಶಂಖಪುಷ್ಪಿ, ದಾಡಿಮ, ಕದಂಬ, ಹೀಗೆ ಪಟ್ಟಿ ಮಾಡುತ್ತ ಹೋದರೆ ಸುಮಾರು **500** ರಿಂದ **600** ಸಸ್ಯಗಳ ಹೆಸರುಗಳನ್ನು ಗಮನಿಸಬಹುದು. ಇಷ್ಟು ಸಸ್ಯಗಳ ಪತ್ರ ಪುಷ್ಪಗಳನ್ನು ನಾವು ಸತ್ಯನಾರಾಯಣ ವ್ರತ, ಲಕ್ಷ್ಮೀ ವ್ರತ ಮುಂತಾದ ಧಾರ್ಮಿಕ ಆಚರಣೆಗಳಲ್ಲಿ ಅರ್ಪಣೆ ಮಾಡುತ್ತೇವೆ. ವ್ರತಗಳಲ್ಲಿ ನಾವು ಮಾಡುವ ಧಾರ್ಮಿಕ ಕ್ರಿಯೆಗಳ ಜೊತೆಗೆ ಈ ಪತ್ರೆಗಳ ಪರಿಚಯವನ್ನು ಮಾಡಿಕೊಳ್ಳುತ್ತೇವೆ. ಈ ಪತ್ರಗಳ ಬಗ್ಗೆ ಮಾಹಿತಿ ಪಡೆಯಲು ನೀವು ಆಯುರ್ವೇದ ಪುಸ್ತಕಗಳನ್ನು ತಿರುವಿ ಹಾಕಿದರೆ, ಈ ಎಲ್ಲ ಪತ್ರಗಳೂ ವೈರಾಣು, ಬ್ಯಾಕ್ಟೀರಿಯಾ ಮತ್ತು ಬೂಷ್ಟು **(Fungus)** ಪ್ರತಿಬಂಧಕ ಗುಣಗಳನ್ನು ಹೊಂದಿರುವುದನ್ನು ಗಮನಿಸುತ್ತೀರಿ. ಎಲ್ಲ ಸೂಕ್ಷ್ಮಾಣು ಜೀವಿಗಳೂ ಗಾಳಿಯ ಮೂಲಕ ಪ್ರಸಾರವಾಗುತ್ತವೆ ಎಂಬುದು ನಮಗೆ ಈಗಾಗಲೇ ತಿಳಿದಿರುವ ವಿಷಯ. ಪೂಜೆಯಲ್ಲಿ ಬಳಸುವ ಪತ್ರಗಳಲ್ಲಿರುವ ಚಲನ ಎಣ್ಣೆಗಳು ನೇರವಾಗಿ ಆಕಾಶಕ್ಕೆ ವ್ಯಾಪಿಸಿ ಅಲ್ಲಿರುವ ಎಲ್ಲ ಸೂಕ್ಷ್ಮಾಣುಜೀವಿಗಳನ್ನು ಸಾಯಿಸುತ್ತವೆ. ಸೂಕ್ಷ್ಮಾಣುಜೀವಿಗಳು, ಧೂಳು ಮುಂತಾದ ಎಲ್ಲ ರೀತಿಯ ಕಶ್ಮಲಗಳು ಆಕಾಶವನ್ನು ಸೇರಿಕೊಂಡು ಮಲಿನ ವಾತಾವರಣ **(Miasma)** ವನ್ನು ಸೃಷ್ಟಿಸುತ್ತವೆ. ಇವೆಲ್ಲವನ್ನೂ ನಿಯಂತ್ರಿಸುವ ಅದ್ಭುತವಾದ ಶಕ್ತಿ ವಟವೃಕ್ಷಕ್ಕಿದೆ. ವಟವೃಕ್ಷದ ಎಲೆಯ ಹಿಂಭಾಗ ನವಿರಾಗಿ ಮೆತ್ತಗಿರುತ್ತದೆ. ಒಬ್ಬರು ಪ್ರಸೂತಿ ಶಾಸ್ತ್ರಜ್ಞರಿಗೆ ಇದನ್ನು ತೋರಿಸಿದಾಗ ಅವರು ತಾಯಿಯ ಗರ್ಭದಲ್ಲಿರುವ ಒಂದು ಮಗುವಿನ ಚರ್ಮಕ್ಕಿಂತ ಇದು ನಯವಾಗಿದ್ದು ಮೃದುವಾಗಿದೆ ಎಂದರು. ಇದೊಂದು ಅದ್ಭುತವಾದ ವಿಚಾರ. ವಟಪತ್ರದ ಮೇಲೆ ಶ್ರೀಕೃಷ್ಣ ಮಗುವಾಗಿ ಮಲಗಿದ್ದಾನೆ ಎಂದು ಹೇಳುತ್ತಾರೆ. ವಟಪತ್ರದಲ್ಲಿ ನಾವು ಮಹಾವಿಷ್ಣುವನ್ನೂ ಕಲ್ಪಿಸಿಕೊಳ್ಳುತ್ತೇವೆ. ಇದರ ಅರ್ಥವಿಷ್ಟೇ; ಪರಮಾತ್ಮನಾದ ಶ್ರೀಕೃಷ್ಣನಿಗಿರುವಷ್ಟೇ ಶಕ್ತಿ ಈ ಎಲೆಗಿದೆ. ಬೀಸುವ ಗಾಳಿ ಈ ಎಲೆಯನ್ನು ತಾಗಿದಾಗ **2.5** ರಿಂದ **10** ಮೈಕ್ರಾನಿನಷ್ಟು ಸೂಕ್ಷ್ಮ ಕಶ್ಮಲಗಳು ನಿವಾರಣೆಯಾಗುತ್ತವೆ.

ಈ ಕಶ್ಮಲಗಳು ಶ್ವಾಸಕೋಶಗಳ ಮೇಲೆ ನೇರವಾಗಿ ದಾಳಿ ಮಾಡುತ್ತವೆ. ಇಂದು ಬೆಂಗಳೂರಿನಲ್ಲಿ ಮಕ್ಕಳೂ ಸೇರಿದಂತೆ ನಲವತ್ತರಿಂದ ಐವತ್ತು ಪ್ರತಿಶತ ಜನರು ಶ್ವಾಸಕೋಶದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇವತ್ತಿಗೂ ನಾವು ಲಸಿಕೆಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದೇವೆ, ಆಸ್ಪತ್ರೆಗಳಿಗೆ, ಔಷಧಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದೇವೆ. ಆದರೆ ರೋಗಕಾರಕಗಳನ್ನೇ ನಿರ್ಮೂಲ ಮಾಡುವ ಶಕ್ತಿ ಹೊಂದಿರುವ ಮಹಾನ್ ವೃಕ್ಷಗಳನ್ನು ಅಲಕ್ಷಿಸಿದ್ದೇವೆ. ಅವು ನಮಗೆ ಬೇಕೇ ಬೇಕು ಎಂದು ಎಲ್ಲಿಯೂ ದನಿ ಎತ್ತುವುದಿಲ್ಲ. ಇಂದು ಬಿಲ್ವ, ಕದಂಬ ಮುಂತಾದ ವೃಕ್ಷಗಳು ಸರ್ವನಾಶವಾಗಿವೆ. ಎಲ್ಲ ಉದ್ಯಾನವನಗಳಲ್ಲಿ ಸೌಂದರ್ಯಕ್ಕಾಗಿ ಹುಲ್ಲಿನ ಹಾಸನ್ನು ಮಾಡುತ್ತಾರೆ. ಅವುಗಳಲ್ಲಿ ಪೆರೋಡಿನ್ ಎಂಬ ರಾಸಾಯನಿಕವನ್ನು ಬಳಸುತ್ತಾರೆ. ಇದು ಅಂತರ್ಜಲವನ್ನು ಸೇರಿ ನೀರನ್ನು ಕಲುಷಿತಗೊಳಿಸುತ್ತದೆ. ಇಂತಹ ನೀರನ್ನು ಕುಡಿಯುವ ಜನರ ಆರೋಗ್ಯ ಹದಗೆಡುತ್ತದೆ. ಆದರೂ ನಮ್ಮಲ್ಲಿ ಹುಲ್ಲಿನ ಹಾಸಿಗೆ ಪ್ರಾಮುಖ್ಯತೆ ನೀಡುತ್ತೇವೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಅದು ಪ್ರತಿಷ್ಠೆಯ ವಿಷಯ. ನಮ್ಮ ದೇಶದಲ್ಲಿ ವರ್ಷಕ್ಕೆ ಸಾವಿರಾರು ಗಂಟೆಗಳ ಕಾಲ ಸೂರ್ಯನ ಬಿಸಿಲು ಇರುತ್ತದೆ. ನಮ್ಮ ದೇಶ ಸೂರ್ಯನ ಝಳ ಪ್ರಖರವಾಗಿರುವ ದೇಶ; ನಮಗೆ ನೆರಳು ಬೇಕು, ನೆರಳು ನೀಡುವ ಮರಗಳು ಬೇಕು.

ಪರಿಸರದ ವಿಷಯದಲ್ಲಿ ನಮಗೆ ನಮ್ಮ ಸಂಸ್ಕೃತಿಯೇ ಮಾರ್ಗದರ್ಶಕವಾಗಬೇಕು. ನಮ್ಮಲ್ಲಿ ಒಂದೊಂದು ಸ್ಥಳಕ್ಕೆ ನಿರ್ದಿಷ್ಟವಾದ ವೃಕ್ಷಗಳಿವೆ, ಅದೇ ರೀತಿ, ಒಂದೊಂದು ಕುಲಕ್ಕೆ ಒಂದೊಂದು ವೃಕ್ಷವಿದೆ. ನಮ್ಮ ದೇಶದಲ್ಲಿ ಹದಿನೈದು ಸಾವಿರ ಕುಲಗಳಿವೆ. ನಮ್ಮ ಹಿರಿಯರು ಪ್ರತಿಯೊಂದು ಕುಲಕ್ಕೆ ಒಂದೊಂದು ವೃಕ್ಷವನ್ನು ನಿಯಮಿಸಿ "ಇದು ನಿಮ್ಮ ಸಂತತಿಯ ಮೂಲವೃಕ್ಷ, ಇದನ್ನು ಕಾಪಾಡಿಕೊಂಡು ಬರಬೇಕು" ಎಂದು ವಿಧಿಸಿದರು. ಒಂದೊಂದು ಸ್ಥಳಕ್ಕೆ ಒಂದೊಂದು ವೃಕ್ಷವಿದೆ. ಉದಾಹರಣೆಗೆ, ನಮ್ಮ ನಂದಿಬೆಟ್ಟದಲ್ಲಿರುವ ಹಲಸಿನ ಮರಗಳು. ಪಾಲ್ಘಾಟ್ ಮಣಿ ಅಯ್ಯರ್ ಅವರು ಮೃದಂಗ ತಯಾರಿಕೆಗೆ ಬಳಸುವ ಹಲಸಿನ ಮರಗಳು ಯಾವ ದಿಕ್ಕಿನಲ್ಲಿ ಬೆಳೆದಿವೆ, ಅವುಗಳ ಎಲೆಗಳು ಸೂರ್ಯನ ಬೆಳಕಿಗೆ ಎಷ್ಟರ ಮಟ್ಟಿಗೆ ತೆರೆದುಕೊಂಡಿವೆ ಎಂಬುದರ ಆಧಾರದ ಮೇಲೆ ಅದು ಹೊರಡಿಸಬಹುದಾದ ನಾದದ ಉತ್ಕೃಷ್ಟತೆಯನ್ನು ನಿರ್ಧರಿಸುತ್ತಿದ್ದರು. ಮೃದಂಗ ತಯಾರಿಕೆಗೆ ನಂದಿ ಬೆಟ್ಟದ ಹಲಸಿನ ಮರವನ್ನು ಮಾತ್ರವೇ ಬಳಸುತ್ತಾರೆ. ಸೂರ್ಯನ ಶಾಖಕ್ಕೆ ತೆರೆದುಕೊಳ್ಳುವುದರ ಜೊತೆಗೆ ನಂದಿ ಬೆಟ್ಟದ ಮಣ್ಣಿನ ಗುಣವೂ ಇದಕ್ಕೆ ಕಾರಣ. ನಂದಿ ಬೆಟ್ಟದ ಮಣ್ಣಿನ ಕಣಗಳು ಕಠಿಣತೆಯಲ್ಲಿ ವಜ್ರದ ನಂತರದ ಸ್ಥಾನವನ್ನು ಪಡೆದುಕೊಂಡಿವೆ. ಈ ಮಣ್ಣಿನಲ್ಲಿ ಬೆಳೆದ ಮರಗಳಿಂದಲೇ ಸಂಗೀತ ವಾದ್ಯಗಳನ್ನು ತಯಾರಿಸುವುದು ಸಾಧ್ಯ. ಲೋಹದ ಧ್ವನಿಯನ್ನು ಹೊರಡಿಸುವ ಘಟಂ ತಯಾರಿಕೆಗೂ ಇದು ಪ್ರಶಸ್ತವಾದ ಮಣ್ಣು. ಈ ಸಾಂಪ್ರದಾಯಿಕ ಜ್ಞಾನವನ್ನು ನಾವು ಇಂದು ಕಳೆದುಕೊಳ್ಳುತ್ತಿದ್ದೇವೆ.

ಈ ಸಂದರ್ಭದಲ್ಲಿ ನಾವು ಕೇರಳದ ಹೆಸರಾಂತ ಪದ್ಮಶ್ರೀ ಪುರಸ್ಕೃತ ಸಸ್ಯ ವಿಜ್ಞಾನಿ, ದಿವಂಗತ ಜಾನಕಿ ಅಮ್ಮಾಳ್ ಅವರನ್ನು ಸ್ಮರಿಸಿಕೊಳ್ಳಬೇಕು. ಅವರು ಒಂದು ಎಥ್ನೋ ಬೊಟಾನಿಕಲ್ ಗಾರ್ಡನ್ ನಿರ್ಮಿಸಿದ್ದಾರೆ. ಸಸ್ಯಗಳನ್ನು ಕುರಿತ ಸಾಂಪ್ರದಾಯಿಕ ಜ್ಞಾನದ ಆಧಾರದಲ್ಲಿ ನಿರ್ಮಿತವಾದ ಸಸ್ಯತೋಟವಿದು. ಇದಕ್ಕಾಗಿ ಅವರು ದೇಶದ ಉದ್ದಗಲದ ಅತ್ಯಂತ ದುರ್ಗಮವಾದ ಪ್ರದೇಶಗಳಿಗೆ ಸಂಚರಿಸಿ ಅಲ್ಲಿನ ಮೂಲನಿವಾಸಿಗಳನ್ನು ಮಾತನಾಡಿಸಿ, ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಿ ಸಂಗ್ರಹಿಸಿದ ಅಮೂಲ್ಯವಾದ ಜ್ಞಾನವನ್ನು ಬಳಸಿಕೊಂಡಿದ್ದಾರೆ. ಜಾನಕಿ ಅಮ್ಮಾಳ್ ಮುಂತಾದ ಅನೇಕ ಸಸ್ಯವಿಜ್ಞಾನಿಗಳು ನಮ್ಮ ಪಾರಂಪರಿಕ ಜ್ಞಾನದ ವೈಜ್ಞಾನಿಕತೆಯನ್ನು ಗುರುತಿಸಿದ್ದಾರೆ. ಹೀಗಾಗಿ ಈ ಪಾರಂಪರಿಕ ಜ್ಞಾನದ ಬೆಳಕಿನಲ್ಲಿ ಪರಿಸರದ ರಕ್ಷಣೆ ನಮ್ಮ ಆದ್ಯತೆಯಾಗಬೇಕು.

# ಮಹಿಳಾ ಸಬಲೀಕರಣ

ಅನಘಾ ಲಿಮಯೆ
ಸಾಮಾಜಿಕ ಕಾರ್ಯಕರ್ತೆ



"ತನ್ನನ್ನೇ ತಾನು ಸುಡಿಸಿಕೊಂಡು ಉರಿಯುತ್ತಿರುವುದು ಬತ್ತಿ. ತನ್ನನ್ನೇ ತಾನು ಸುಡಿಸಿಕೊಂಡು ಜಗತ್ತಿಗೆ ದೀಪವನ್ನು ಕೊಡುವ ಬತ್ತಿಯಂತೆ ನೀವಿರಬೇಕು" ಎಂಬ ಮಾತನ್ನು ನನ್ನ ತಾಯಿ ನಾವು ಸಣ್ಣವರಿದ್ದಾಗ ಯಾವಾಗಲೂ ನಮಗೆ ಹೇಳುತ್ತಿದ್ದರು. ಅವರಿಗೆ ಬಡವರ ಬಗ್ಗೆ ಬಹಳಷ್ಟು ಕಾಳಜಿಯಿತ್ತು. ಆಕೆಗೆ ಅನ್ನದಾನ ಮಾಡುವುದು ಮತ್ತು ಮಕ್ಕಳನ್ನು ಮನೆಯಲ್ಲಿ ಇರಿಸಿಕೊಂಡು ಅವರ ವಿದ್ಯಾರ್ಜನೆಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡುವುದು ನನ್ನ ತಾಯಿಯ ದಿನಚರಿಯ ಭಾಗವಾಗಿತ್ತು.

ಪ್ರತಿದಿನ ಕೆಲವು ಭಿಕ್ಷುಕರು ನಮ್ಮ ಮನೆಗೆ ಬರುತ್ತಿದ್ದರು. ನಿಮಗೆ ವಿಚಿತ್ರವೆನ್ನಿಸಬಹುದು, ಕಾರಣಾಂತರಗಳಿಂದ ಒಮ್ಮೊಮ್ಮೆ ಅವರು ಬರದಿದ್ದ ದಿನ ನಮ್ಮ ಅಮ್ಮ ಕೆಲವೊಮ್ಮೆ ತಾವೇ ಅವರನ್ನು ಹುಡುಕಿಕೊಂಡು ಹೋಗಿ ಅವರಿಗೆ ಅನ್ನವನ್ನು ಕೊಟ್ಟು ಬರುತ್ತಿದ್ದರು. ಅದೇ ರೀತಿ, ಪ್ರಾಣಿಗಳಿಗೂ ಕೂಡ ಆಕೆ ದಿನನಿತ್ಯ ಆಹಾರವನ್ನು ಇಡಲು ಮರೆಯುತ್ತಿರಲಿಲ್ಲ. "ಸಣ್ಣ ಸಣ್ಣ ಗಿಡಗಳಿಗೆ ನೀರು ಹಾಕಿ, ಗಿಡಕ್ಕೂ ಜೀವ ಇದೆಯಪ್ಪ" ಎಂದು ಪ್ರತಿನಿತ್ಯ ಹೇಳುತ್ತಿದ್ದರು. ಇದು ನನ್ನ ಮನಸ್ಸಿನ ಮೇಲೆ ಬಹಳಷ್ಟು ಪರಿಣಾಮ ಬೀರಿತ್ತು. ನಾನು ಕೂಡ ಏನಾದರೂ ಮಾಡಬೇಕು ಅನ್ನಿಸುತ್ತಿತ್ತು.

ಸಾಲು ಮರದ ತಿಮ್ಮಕ್ಕನಿಗೆ ರಾಷ್ಟ್ರ ಪ್ರಶಸ್ತಿ ದೊರೆತಾಗ ಅವರು ಮಾಡಿದ ಸಾಧನೆಯ ಉದಾತ್ತತೆ ಇಡೀ ಜಗತ್ತಿಗೆ ತಿಳಿಯಿತು. ಅವರು ಮರಗಳನ್ನು ನೆಟ್ಟಿದ್ದರು, ಸಾಕುತ್ತಿದ್ದರು, ಬೆಳೆಸಿದ್ದರು. ಇವೆಲ್ಲವನ್ನೂ ಅವರು ಯಾವುದೋ ಒಂದು ಪ್ರಶಸ್ತಿ ದೊರೆಯುತ್ತದೆ ಎಂದು ಮಾಡಲಿಲ್ಲ. ಅವರ ಶ್ರಮದ ಹಿಂದೆ ದಾರಿಹೋಕರಿಗೆ ನೆರಳಾಗಲಿ ಎಂಬ ಸದುದ್ದೇಶ ಇರುವುದನ್ನು ಗಮನಿಸಿದಾಗ ಈ ಸಮಾಜದ ಬಗ್ಗೆ, ಜನರ ಬಗ್ಗೆ ಅವರಿಗಿರುವ ಅಪಾರ ಕಾಳಜಿಯ ಪರಿಚಯವಾಗುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣುಮಕ್ಕಳು ತಮ್ಮ ಶಕ್ತಿಗೆ ಮೀರಿ ಬೇರೆಯವರಿಗೆ ಸಹಾಯವನ್ನು ಮಾಡುವುದನ್ನು ಎಲ್ಲ ಕಡೆಯೂ ಎಲ್ಲ ಕಾಲದಲ್ಲಿಯೂ ನೋಡಬಹುದು.

ಹಿಂದಿನಿಂದಲೂ "ಮನೆಮದ್ದು" ಎಂದು ಮಾಡುವ ಆರೈಕೆಯ ಜ್ಞಾನವನ್ನು ಉಳಿಸಿಕೊಂಡು ಬಂದವರು ಮಹಿಳೆಯರೇ. ಅವರು ಪ್ರಸೂತಿ ಗೃಹಗಳಿಲ್ಲದ ಕಾಲದಲ್ಲಿ ನೆರೆಹೊರೆಯ ಹೆಣ್ಣು ಮಕ್ಕಳ ಹೆರಿಗೆಗೆ ನೆರವಾಗುವುದಲ್ಲದೆ ಬಾಣಂತನವನ್ನೂ ಮಾಡುತ್ತಿದ್ದರು. ಸುಖವಿರಲಿ, ದುಃಖವಿರಲಿ, ಎಲ್ಲವನ್ನೂ ನೆರೆಹೊರೆಯ ಜನರೊಂದಿಗೆ ಹಂಚಿಕೊಂಡು ಸ್ಪಂದಿಸುವ ಕ್ರಮ ಇಂದಿಗೂ ಇದೆ. ನಮ್ಮ ಈ ರಕ್ತಗುಣ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ.



ಸಮಾಜದಲ್ಲಿ ಮುಂದೆ ಸಾಕಷ್ಟು ಬದಲಾವಣೆಗಳು ಕಾಣಿಸಿದಾಗ ಗಂಡಸರು ಮಾಡುವ ಕೆಲಸವನ್ನು ಮಾಡಲೂ ಹೆಂಗಸರು ಹಿಂಜರಿಯಲಿಲ್ಲ. ಮಹಿಳೆಯರು ರಿಕ್ಷಾ ಓಡಿಸುವುದು, ವಿಮಾನ ಚಾಲನೆ, ಕಂಡಕ್ಟರ್ ಕೆಲಸ ಮುಂತಾದ ಶ್ರಮವನ್ನು ಅಪೇಕ್ಷಿಸುವ ಕೆಲಸಗಳನ್ನೂ ನಿರ್ವಹಿಸಿ ಗಂಡಸರು ಮಾಡುವ ಎಲ್ಲ ಕೆಲಸಗಳನ್ನೂ ತಾವು ನಿರ್ವಹಿಸಬಲ್ಲೆವು ಎಂದು ತೋರಿಸಿಕೊಟ್ಟಿದ್ದಾರೆ. ಹೆಣ್ಣುಮಕ್ಕಳಲ್ಲಿ ಇಂದು ಕಾಣಿಸುತ್ತಿರುವ ಈ ಧೈರ್ಯ ಸಂತೋಷ ಕೊಡುತ್ತದೆ.

ಸಮಾಜದ ಸುಕ್ಷೇಮದಲ್ಲಿ ಮಹಿಳೆಯ ಪಾತ್ರ ಮಹತ್ತ್ವದ್ದು. ಅದಮ್ಯ ಚೇತನ ಸಂಸ್ಥೆಯ ಡಾ. ತೇಜಸ್ವಿನಿ ಅನಂತಕುಮಾರ್ ಇದಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. ವೃತ್ತಿನಿರತ ಇಂಜಿನಿಯರ್ ಆಗಿದ್ದ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ, ಸಮಾಜಸೇವೆಯಲ್ಲಿ ತೊಡಗಿಕೊಂಡರು. ಅನ್ನ, ಅಕ್ಷರ, ಆರೋಗ್ಯ ಎಂಬ ತ್ರಿವಳಿ ಧ್ಯೇಯವನ್ನು ಮುಂದಿರಿಸಿಕೊಂಡು ಸಮಾಜದ ಕೆಲಸವನ್ನು ಪ್ರಾರಂಭ ಮಾಡಿದರು. ಅಷ್ಟಲ್ಲದೆ ಪರಿಸರ ಸಂರಕ್ಷಣೆಯ ಕೆಲಸದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಅಪಾರವಾದ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ.

ಸಬಲೀಕರಣವೆಂದರೆ ಆರ್ಥಿಕ ಬೆಳವಣಿಗೆ ಮಾತ್ರವಲ್ಲ.ಪ್ರತಿದಿನದ ಪ್ರತಿಕ್ಷಣದ ಆಗುಹೋಗುಗಳ, ಸುತ್ತಮುತ್ತಲೂ ಜರುಗುವ ವಿದ್ಯಮಾನಗಳ ಬಗ್ಗೆ ಮಹಿಳೆಯರಿಗೆ ಅರಿವಿರಬೇಕು, ಅವುಗಳ ಬಗ್ಗೆ ಕಾಳಜಿಯಿರಬೇಕು ಮತ್ತು ಸಮಾಜದ ನ್ಯೂನತೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರವನ್ನು ಹುಡುಕುವಲ್ಲಿ ಮಹಿಳೆಯರ ಶಕ್ತಿಯ ಸದುಪಯೋಗವಾಗಬೇಕು. (ಸೌಜನ್ಯ: ಆಕಾಶವಾಣಿ, ಮೈಸೂರು)

# ಭಾರತದ ಔಷಧ ವಲಯದ ಸವಾಲುಗಳು

ಪುಟ 8 ರಿಂದ ಮಾರುಕಟ್ಟೆಗಳಿಗೆ ಹೋಲಿಸಿದರೆ ನಮ್ಮ ದೇಶದ ಮಾರುಕಟ್ಟೆ ಇನ್ನೂ ಬ್ರ್ಯಾಂಡೆಡ್ ಔಷಧಗಳ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ನಮ್ಮ ದೇಶದಲ್ಲಿ ಕನಿಷ್ಠ 95 ಪ್ಯಾರಾಸಿಟಮಾಲ್ ಬ್ರ್ಯಾಂಡೆಡ್ ಔಷಧಗಳಿವೆ. ನಮ್ಮ ವೈದ್ಯರೂ ಕೂಡ ಔಷಧಗಳ ಜೆನೆರಿಕ್ ಹೆಸರುಗಳನ್ನು ಬರೆಯುವ ಬದಲು, ಕ್ಯಾಲ್ಪಾಲ್, ಕ್ರೋಸಿನ್, ಡೋಲೋ ಮುಂತಾದ ಬ್ರ್ಯಾಂಡುಗಳ ಹೆಸರನ್ನೇ ಬರೆಯುತ್ತಿದ್ದಾರೆ. ಜೆನೆರಿಕ್ ಮತ್ತು ಬ್ರ್ಯಾಂಡೆಡ್ ಔಷಧಗಳಲ್ಲಿನ ಕ್ಷಮತೆಯಲ್ಲಿ ಏನೇನೂ ವ್ಯತ್ಯಾಸವಿರುವುದಿಲ್ಲ. ಬ್ರ್ಯಾಂಡಿಂಗ್ ಪ್ರಕ್ರಿಯೆಯಲ್ಲಿ ಸಾಕಷ್ಟು ಹಣ ವ್ಯಯವಾಗುವುದರಿಂದ ಬ್ರ್ಯಾಂಡೆಡ್ ಔಷಧಗಳ ಬೆಲೆಯೂ ಅತಿಯಾಗಿರುತ್ತದೆ. ವಿಮಾ ಸೌಲಭ್ಯ ಉತ್ತಮವಾಗಿರುವ ಪಾಶ್ಚಾತ್ಯ ದೇಶಗಳಲ್ಲಿ ಔಷಧಗಳ ಜೆನೆರಿಕ್ ಹೆಸರುಗಳನ್ನು ಬರೆಯುವುದು ಕಡ್ಡಾಯವಾಗಿರುತ್ತದೆ. ಆ ದೇಶಗಳಲ್ಲಿ ಸಹಪಾವತಿ (co-pay) ಪದ್ಧತಿಯಿರುವುದರಿಂದ ರೋಗಿಯು ಪಡೆದುಕೊಂಡಿರುವ ವಿಮಾ ಪಾಲಿಸಿಗನುಗುಣವಾದ ಬೆಲೆಯ ಔಷಧಗಳನ್ನು ನೀಡುವುದು ಔಷಧ ಅಂಗಡಿಯವರಿಗೆ ಕಡ್ಡಾಯವಾಗಿರುತ್ತದೆ. ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಅಂತಹ ಪದ್ಧತಿಯಿರುವುದಿಲ್ಲ. ಹೆಚ್ಚೆಂದರೆ 700 ರಿಂದ 800 ರೂಪಾಯಿಗಳಿಗೆ ಲಭ್ಯವಾಗಬೇಕಿದ್ದ ರೆಮ್ಡೆಸಿವಿರ್ ನಂತಹ ಔಷಧಗಳ ಬೆಲೆ ಕೆಲವೊಮ್ಮೆ 35000 ರೂಪಾಯಿಗಳನ್ನು ಮೀರುವುದಕ್ಕೆ ಇದೇ ಕಾರಣ.

ಈ ರೀತಿಯಾಗಿ ಸೂಕ್ತವಾದ ನಿಯಮಾವಳಿಗಳಿಲ್ಲದಿರುವುದರಿಂದ ದೇಶದಲ್ಲಿ ಜನೌಷಧಿಯಂತಹ ಜೆನೆರಿಕ್ ವ್ಯವಸ್ಥೆಯೊಂದರ ರಚನೆ, ವಿಮಾ ಸೌಲಭ್ಯಗಳಲ್ಲಿ ಸುಧಾರಣೆ ಮತ್ತು ಗುಣಮಟ್ಟ ಹಾಗೂ ಅನುಪಾಲನೆಯ ವಿಷಯಗಳೂ ಸಮಸ್ಯೆಯಾಗಿದ್ದು ಈ ನಿಟ್ಟಿನಲ್ಲಿ ಇನ್ನೂ ಬಹಳ ಕೆಲಸ ನಡೆಯಬೇಕಾಗಿದೆ. ಔಷಧಿ ತಯಾರಿಕೆ ನಿಯಮಗಳ ಅನುಪಾಲನೆಯಲ್ಲಿಯೂ ನಮ್ಮ ಕಂಪೆನಿಗಳು ಸುಧಾರಣೆ ಮಾಡಿಕೊಳ್ಳಬೇಕಾಗಿದೆ. ಅಮೇರಿಕವು ಔಷಧ ತಯಾರಿಕೆಯ ವಿಷಯದಲ್ಲಿ ಉತ್ತಮ ಗುಣಮಟ್ಟವನ್ನು ವಿಧಿಸಿದೆ. ನಮ್ಮ ದೇಶದ ಅನೇಕ ಕಂಪೆನಿಗಳು ಅಮೇರಿಕದ ಆಹಾರ ಮತ್ತು ಔಷಧ ನಿಯಂತ್ರಣ ನಿಯಮಗಳನ್ನು ಪಾಲಿಸುತ್ತಿದ್ದರೂ ಉತ್ತರಭಾರತ, ಮಹಾರಾಷ್ಟ್ರ ಮತ್ತು ತೆಲಂಗಾಣಗಳಲ್ಲಿ ಸ್ಥಾಪಿತವಾಗಿರುವ ಅನೇಕ ಕಂಪೆನಿಗಳು ಈ ನಿಯಮಗಳನ್ನು ಪಾಲಿಸುತ್ತಿಲ್ಲ. ಆದರೂ ಇವು ದೇಶದ ಆಂತರಿಕ ಮಾರುಕಟ್ಟೆಗಾಗಿ ಅಪಾರ ಪ್ರಮಾಣದ ಔಷಧಗಳನ್ನು ತಯಾರಿಸುತ್ತಿವೆ. ಹೀಗಾಗಿ ಗುಣಮಟ್ಟಗಳ ವಿಷಯದಲ್ಲಿ ಅಮೇರಿಕ ಮತ್ತು ಭಾರತದ ನಡುವೆ ಅಂತರವಿದ್ದೇ ಇದೆ.

**ಮಾರುಕಟ್ಟೆ ನಿಯಂತ್ರಣ ಮತ್ತು ವಲಯದ ಭವಿಷ್ಯ**

ಭಾರತವನ್ನು ಅರೆಬರೆ ನಿಯಂತ್ರಣದಲ್ಲಿರುವ ಅಥವಾ ನಿಯಂತ್ರಣಗಳೇ ಇಲ್ಲದ ಮಾರುಕಟ್ಟೆ ಎಂದು ಇನ್ನೂ ಪರಿಗಣಿಸಲ್ಪಟ್ಟಿದೆ. ಜಾಗತಿಕ ಗುಣಮಟ್ಟಗಳನ್ನು ಪಾಲಿಸದ ಕಂಪೆನಿಗಳು ತಯಾರಿಸುವ ಔಷಧಗಳು ನಮ್ಮ ದೇಶದಲ್ಲಿ ಮಾರಾಟವಾಗುತ್ತಿವೆ. ತೀರ ಕಳಪೆ ದರ್ಜೆಯ ಅನೇಕ ಔಷಧಗಳು ಮಾರುಕಟ್ಟೆಗೆ ಬರುವುದನ್ನು ತಪ್ಪಿಸಲು ಯಾವುದೇ ಗಂಭೀರವಾದ ಪ್ರಯತ್ನಗಳು ನಡೆಯುತ್ತಿಲ್ಲ. ಗುಣಮಟ್ಟವನ್ನು ಹೆಚ್ಚಿಸುತ್ತ ಹೋದರೆ ಔಷಧಗಳ ಬೆಲೆಯಲ್ಲಿಯೂ ಏರಿಕೆಯಾಗುತ್ತದೆಯೆಂಬ ಭಾವನೆ ನಮ್ಮಲ್ಲಿದೆ. ಇದು ಸರಿಯಲ್ಲ.

ಹೀಗಾಗಿ, ಗುಣಮಟ್ಟ ಮತ್ತು ಅನುಪಾಲನೆಯ ವಿಷಯದಲ್ಲಿ ಕಟ್ಟುನಿಟ್ಟಾದ ನಿಯಮಗಳನ್ನು ರೂಪಿಸುವುದು ಇಂದಿನ ಅಗತ್ಯ. ಜೊತೆಗೆ ವೈದ್ಯರು ನಿರ್ದಿಷ್ಟ ಬ್ರ್ಯಾಂಡುಗಳ ಔಷಧಿಗಳನ್ನು ಸೂಚಿಸುವ ಬದಲು ರೋಗಿಯು ಪಡೆದಿರುವ ವಿಮಾಪಾಲಿಸಿಗೆ ಅನುಗುಣವಾದ ದರದ ಔಷಧಗಳನ್ನು ಸೂಚಿಸುವ ನಿಟ್ಟಿನಲ್ಲಿಯೂ ಬದಲಾಗಬೇಕು.

ಔಷಧಗಳ ಬೆಲೆಯನ್ನು ನಿಯಂತ್ರಿಸುವ ಕಾನೂನುಗಳು ನಮ್ಮಲ್ಲಿವೆ. ಆದರೆ ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ತಂತ್ರಜ್ಞಾನದ ಬಳಕೆಗಳ ವಿಷಯದಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡಿ ಅವುಗಳನ್ನು ತ್ವರೆಗೊಳಿಸಬೇಕಾಗಿದೆ. ನಮ್ಮ ದೇಶದಲ್ಲಿ ಸಣ್ಣ/ದೊಡ್ಡ ಔಷಧ ಕಂಪೆನಿಗಳಿಗೆ ಸರಕಾರವು ನೀಡಿರುವ ಸಹಾಯಹಸ್ತವು ಕೇವಲ ಉತ್ಪಾದನೆಗೆ ಸೀಮಿತವಾಗಿದೆ. ಜೊತೆಗೆ ಗುತ್ತಿಗೆ ಸಂಶೋಧನೆಯ (Contract research) ಕಡೆಯೂ ನಮ್ಮ ಗಮನ ಹರಿಯಬೇಕಾಗಿದೆ.

ಔಷಧ ವಲಯದಲ್ಲಿ ತೆಗೆದುಕೊಳ್ಳುವ ನೀತಿನಿರೂಪಣೆಗಳು ತತ್ ಕ್ಷಣದಲ್ಲೋ ಇನ್ನು ಐದಾರು ವರ್ಷಗಳಲ್ಲೋ ಫಲನೀಡುತ್ತವೆಯೆಂದು ಹೇಳಲಾಗದು. ಔಷಧ ವಲಯವು ಅಧಿಕ ನಿಯಂತ್ರಣ ಮತ್ತು ನೈತಿಕತೆಗೊಳಪಟ್ಟ ಮಾರುಕಟ್ಟೆಯಾಗಿರುವುದು ಇದಕ್ಕೆ ಕಾರಣ. ಈ ವಲಯದಲ್ಲಿ ಉತ್ಪನ್ನವು ಕಲ್ಪನೆಯ ಹಂತದಿಂದ ಬಳಕೆಯ ಹಂತಕ್ಕೆ ಬರಲು ಸುಮಾರು ನಾಲ್ಕೈದು ವರ್ಷಗಳೇ ಬೇಕಾಗುತ್ತವೆ. ಆದುದರಿಂದ ಸ್ಥಾಪಿತವಾದ ಮರುಕ್ಷಣದಲ್ಲಿಯೇ ಉತ್ಪಾದನೆ ಪ್ರಾರಂಭಿಸುವ ಭಾರೀ ಕೈಗಾರಿಕೆಗಳ ನೀತಿಗಳಿಗಿಂತ ಭಿನ್ನವಾದ ನೀತಿಗಳನ್ನು ನಿರೂಪಿಸುವುದೂ ಅಗತ್ಯ.

# ವಿಮಾನಯಾನದ ಕನಸು - ನನಸು

ಪ್ರದೀಪ್ ಓಕ್, ನಿರ್ದೇಶಕರು, ಅದಮ್ಯ ಚೇತನ ಟ್ರಸ್ಟ್

ಎಂಭತ್ತರ ದಶಕದಲ್ಲಿ ವಿಮಾನದಲ್ಲಿ ಪ್ರಯಾಣಿಸುವಷ್ಟು ಆರ್ಥಿಕ ಸಾಮರ್ಥ್ಯ ಬಡವರಿಗಿರಲಿ, ಮಧ್ಯಮ ವರ್ಗದವರಿಗೂ ಇರಲಿಲ್ಲ. ನಾನು ಮೊದಲ ಬಾರಿ ವಿಮಾನ ಪ್ರಯಾಣ ಮಾಡಿದ್ದು 32 ವರ್ಷಗಳ ಹಿಂದೆ, ಅಂದರೆ 1989 ರಲ್ಲಿ. ನಮ್ಮ ಕುಟುಂಬದಲ್ಲಿ ವಿಮಾನದಲ್ಲಿ ಪ್ರಯಾಣಿಸಿದವರಲ್ಲಿ ನಾನೇ ಮೊದಲಿಗ. ಆ ಸಮಯದ ಭಾರತದಲ್ಲಿ ನನ್ನಂಥ ಮಧ್ಯಮ ವರ್ಗದವರಿಗೂ ವಿಮಾನಯಾನವೆಂದರೆ ಕನಸೇ ಆಗಿತ್ತು. ಪ್ರತಿಯೊಬ್ಬರಿಗೂ ಜೀವನದಲ್ಲಿ ಒಮ್ಮೆಯಾದರೂ ವಿಮಾನದಲ್ಲಿ ಹಾರಾಡಬೇಕು ಎಂಬ ಆಸೆ ಇರುತ್ತಿತ್ತು.

1992 ರಿಂದ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಕಂಪನಿಯ ಕೆಲಸಕ್ಕಾಗಿ ವಿದೇಶಕ್ಕೆ ಪ್ರಯಾಣಿಸುವ ಸಂದರ್ಭದಲ್ಲಿ ಬೆಂಗಳೂರಿನಿಂದ ವಿದೇಶಗಳಿಗೆ ನೇರ ವಿಮಾನ ಸಂಪರ್ಕವಿಲ್ಲದಿದ್ದುದರಿಂದ ಮುಂಬೈ ಅಥವಾ ಮದ್ರಾಸ್ ಮಾರ್ಗವಾಗಿ ಹೋಗಬೇಕಾಗುತ್ತಿತ್ತು. ಅದೇ ಸಮಯದಲ್ಲಿ ಬೆಂಗಳೂರು ಮಾಹಿತಿ ತಂತ್ರಜ್ಞಾನದ ರಾಜಧಾನಿಯಾಗಿ ಸಾಕಷ್ಟು ಬೆಳೆದಿತ್ತು. 1999 ರಲ್ಲಿ ಬೆಂಗಳೂರು ಹೆಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ ಹೊಸ ಅಂತಾರಾಷ್ಟ್ರೀಯ ಟರ್ಮಿನಲ್ ಸ್ಥಾಪನೆಯಾಯಿತು. ಏರೋಬ್ರಿಜ್ ವ್ಯವಸ್ಥೆಯೂ ಆಯಿತು. ಶ್ರೀ ಅನಂತಕುಮಾರ್ ಅವರು ಆಗ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರದಲ್ಲಿ ವಿಮಾನಯಾನ ಸಚಿವರಾಗಿದ್ದರು. ಮೊತ್ತ ಮೊದಲ ಬಾರಿಗೆ ಬೆಂಗಳೂರಿನಿಂದ ನೇರವಾಗಿ ನ್ಯೂಯಾರ್ಕಿಗೆ ವಿಮಾನಸೇವೆಯೂ ಶುರುವಾಗಿತ್ತು.

### ಸರ್ವರಿಗಾಗಿ ವಿಮಾನಯಾನ

ಆ ಸಂದರ್ಭದಲ್ಲಿ ಶ್ರೀ ಅನಂತಕುಮಾರ್ ಅವರು ತಮ್ಮ ಭಾಷಣದಲ್ಲಿ "ವಿಮಾನಯಾನವೂ ಜನತಾಂತ್ರಿಕವಾಗಬೇಕು, ಬಡವ ಶ್ರೀಮಂತರೆಂಬ ಭೇದವಿಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರೂ ಕೂಡ ವಿಮಾನದಲ್ಲಿ ಪ್ರಯಾಣ ಮಾಡುವಂತಾಗಬೇಕು. ಎಲ್ಲರಿಗೂ ಕೈಗೆಟಕುವ ದರದಲ್ಲಿ ವಿಮಾನಸೇವೆ ದೊರೆಯಬೇಕು" ಎಂದು ಹೇಳಿದ ಮಾತು ನನಗೆ ಇನ್ನೂ ನೆನಪಿದೆ. ಮುಂದೆ ಕೇಂದ್ರ ಸರ್ಕಾರವು " ಮುಕ್ತ ಆಗಸ ನೀತಿ" ಯನ್ನು ಘೋಷಿಸಿತು. ಮತ್ತು, ಬೇಡಿಕೆಗೆ ಅನುಗುಣವಾಗಿ ಬದಲಾಗುವ ದರಪದ್ಧತಿಯನ್ನು ಜಾರಿಗೆ ತಂದಿತು. ಇದರ ಪರಿಣಾಮವಾಗಿ ಪ್ರಯಾಣದರಗಳು ಕೂಡ ಗಣನೀಯವಾಗಿ ಕಡಿಮೆಯಾದವು. ಕೆಲವೊಮ್ಮೆ ಟಿಕೇಟುಗಳು ನಾನೂರು, ಐನೂರು ರೂಪಾಯಿಗಳಿಗೂ ಸಿಗುವಂತಹ ಸಂದರ್ಭಗಳು ಉಂಟಾದವು.



ಹೀಗಾಗಿ ಭಾರತದಲ್ಲಿ ಸಾಮಾನ್ಯ ಜನರು ವಿಮಾನದಲ್ಲಿ ಪ್ರಯಾಣ ಮಾಡಬಹುದಾದ ಕಾಲ ಅಂದಿನಿಂದಲೇ ಪ್ರಾರಂಭವಾಯಿತು. ಮೊದಲಿಗೆ ಬೆರಳೆಣಿಕೆಯಷ್ಟಿದ್ದ ವಿಮಾನ ನಿಲ್ದಾಣಗಳ ಸಂಖ್ಯೆ ಇಂದು 1 4 0 ದಾಟಿದೆ. ಕರ್ನಾಟಕದಲ್ಲಿ ಬೆಂಗಳೂರಿನ ನಂತರ ಹುಬ್ಬಳ್ಳಿ, ಕಲ್ಬುರ್ಗಿ, ಮೈಸೂರು, ಬೆಳಗಾವಿ ಇತ್ಯಾದಿ ನಗರಗಳಿಗೆ ವಿಮಾನಯಾನದ ಸೇವೆ ಪ್ರಾರಂಭವಾಯಿತು. ಇತ್ತೀಚೆಗಂತೂ " ಉಡಾನ್" ಬಂದ ನಂತರ ವಿಮಾನಯಾನ ಕ್ಷೇತ್ರದಲ್ಲಿ ಬಹಳ ವೇಗವಾದ ಬೆಳವಣಿಗೆ ಉಂಟಾಗಿ ಜನಸಾಮಾನ್ಯರೂ ಕೈಗೆಟಕುವ ದರದಲ್ಲಿ ವಿಮಾನದಲ್ಲಿ ಪ್ರಯಾಣಿಸಬಹುದಾಗಿದೆ. ಇಂದು ಭಾರತದ ವಿಮಾನದ ಮಾರುಕಟ್ಟೆಯು ಇಡೀ ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದೆ.

### ಹೂವು ಹಣ್ಣುಗಳಿಗೂ ಸುಗಮಯಾನ

ವಿಮಾನಗಳು ಬರೀ ಪ್ರಯಾಣಿಕರಿಗಾಗಿ ಮಾತ್ರವಲ್ಲ, ಸರಕು ಸಾಗಾಣಿಕೆಯಲ್ಲೂ ಬಹು ದೊಡ್ಡ ಪಾತ್ರ ವಹಿಸುತ್ತವೆ. ಬೆಂಗಳೂರು, ಕೋಲಾರ, ಮೈಸೂರು, ಮಂಡ್ಯ, ದೊಡ್ಡಬಳ್ಳಾಪುರ ಮುಂತಾದ ಈ ಎಲ್ಲ ಭಾಗದಿಂದಲೂ ಹೂವು, ಹಣ್ಣು, ತರಕಾರಿಗಳು ವಿದೇಶಕ್ಕೆ ನಿರ್ಯಾತವಾಗುತ್ತಿವೆ. ಜಾಗತಿಕ ಹೂವಿನ ಹರಾಜು ಪ್ರತಿದಿವಸ ಮುಂಜಾನೆ ಹಾಲೆಂಡಿನ ರೋಟರ್ ಡ್ಯಾಂ ನಗರದಲ್ಲಿ ನಡೆಯುತ್ತದೆ. ಪ್ರತಿದಿವಸ ಎಷ್ಟೋ ವಿಮಾನಗಳು ಬೆಂಗಳೂರಿನಿಂದ ನೇರವಾಗಿ ಅಲ್ಲಿಗೆ ಹೂವುಗಳನ್ನು ಕೊಂಡೊಯ್ಯುತ್ತಿವೆ. ಆದರೆ ಆ ಹೂವುಗಳನ್ನು ಸಂರಕ್ಷಿಸುವ ವ್ಯವಸ್ಥೆ ಬೆಂಗಳೂರಿನಲ್ಲಿ ಇರಲಿಲ್ಲ. ಹೀಗಾಗಿ ಹರಾಜು ಕೇಂದ್ರವನ್ನು ತಲುಪುವ ಹೊತ್ತಿಗೆ ಹೂವುಗಳ ಗುಣಮಟ್ಟ ಕಡಿಮೆಯಾಗುತ್ತಿತ್ತು. ಅದಕ್ಕನುಗುಣವಾಗಿ ದರವೂ ಕೂಡ ಕಡಿಮೆಯಾಗುತ್ತಿತ್ತು. 2000 ರ ಇಸವಿಯಲ್ಲಿ ಶ್ರೀ ಅನಂತಕುಮಾರ್ ಅವರು ಹೆಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿಯೇ 'ಹಾಳಾಗುವ' ಸರಕು ಘಟಕ (ಪೆರಿಷೇಬಲ್ ಕಾರ್ಗೋ ಯೂನಿಟ್) ವನ್ನು ಸ್ಥಾಪಿಸಿದರು. ಈ ಘಟಕವು ಸ್ಥಾಪನೆಯಾದ ಒಂದೇ ವರ್ಷದಲ್ಲಿ ಬೆಂಗಳೂರಿನಿಂದ ಹೂವು, ತರಕಾರಿ, ಹಣ್ಣುಗಳ ರಫ್ತುಮೌಲ್ಯ 300 ಕೋಟಿಗೂ ಹೆಚ್ಚಾಯಿತು. ಇಂದು ಬಹುಶಃ ನೂರಾರು ವಿಮಾನಗಳು ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಸರಕುಗಳನ್ನು ಬೆಂಗಳೂರಿನ ವಿಮಾನ ನಿಲ್ದಾಣದಿಂದ ಸಾಗಣೆ ಮಾಡುತ್ತಿವೆ.




### ಅನಂತಕುಮಾರರ ಮೇಲ್ಪಂಕ್ತಿ

ಈ ರೀತಿ ವಿಮಾನಯಾನ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಲು ಭಾರತಕ್ಕೆ ಬಹಳಷ್ಟು ಅವಕಾಶಗಳಿವೆ. ವಿಮಾನಸೇವೆಯನ್ನು ರಾಜಕೀಯ ದೃಷ್ಟಿಯಿಂದ ನೋಡದೆ ಹಾಗೂ ಇದೊಂದು ವಿಲಾಸಿ ಜೀವನದ ಭಾಗ ಎಂದು ಭಾವಿಸದೆ ಸಮಾಜ ಸೇವೆಯ ನಿಟ್ಟಿನಲ್ಲಿ ಅದನ್ನು ಅಭಿವೃದ್ಧಿ ಪಡಿಸುವುದು ಬಹಳ ಮುಖ್ಯವಾಗಿದೆ. ಸಮಾಜದ ಪ್ರತಿಯೊಂದು ವರ್ಗದ ಜನರಿಗೂ ಅದರ ಸೇವೆಯು ಲಭ್ಯವಾಗುವ ರೀತಿಯಲ್ಲಿ ನೀತಿ ನಿರೂಪಣೆಗಳನ್ನು ಮಾಡುವುದು ಮತ್ತು ಅವುಗಳನ್ನು ಅನುಷ್ಠಾನ ಮಾಡುವುದು ಬಹಳ ಮುಖ್ಯವಾಗಿದೆ. ಅನಂತಕುಮಾರರು ವಿಮಾನಯಾನ ಖಾತೆಯ ಸಚಿವರಾಗಿದ್ದಾಗ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ವಿಮಾನಯಾನ ಕ್ಷೇತ್ರದ ಮುಂದಿನ ನಡೆಗಳು ನಿರೂಪಿತವಾಗಬೇಕು ಎಂದು ನನಗನ್ನಿಸುತ್ತದೆ.
(ಸೌಜನ್ಯ: ಆಕಾಶವಾಣಿ, ಮೈಸೂರು)

## ಅನಂತಪಥ

Editor: **Gopal T.S** | Assistance: **K . Janardhana Thunga** | Layout: **Abhishek Gubbi Creatives**

Inputs: **Diwakar Hegde | Pradeep Oak | Poornaprajna | A G Lakshminarayana**

Photographs: **Ananthkumar Pratishthana | Poornaprajna | Adamya Chethana | T S Gopal**

Acknowledgements: **Ravindra | Dr. Yellappa Reddy AN | All India Radio Mysore | Adamya Chethana**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅದಮ್ಯ ಚೇತನಕ್ಕೆ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮೀಜಿಯವರು ಭೇಟಿ ನೀಡಿ ಚಟುವಟಿಕೆಗಳನ್ನು ವೀಕ್ಷಿಸಿ ಆಶೀರ್ವದಿಸಿದರು.




ಅದಮ್ಯ ಚೇತನದ ಹೊಸ ಪ್ರಯೋಗ "ಪೌಷ್ಟಿಕ ಸಾತ್ವಿಕ ಆಹಾರ" ಆಂದೋಲನದ ಆರಂಭ




ನಿತ್ಯ ಅನ್ನದಾನ ಕಾರ್ಯಕ್ರಮ



ಅದಮ್ಯ ಚೇತನದ ಶ್ರಮದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಾಲೇಜು ವಿದ್ಯಾರ್ಥಿಗಳೊಡನೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ವಿತರಣೆಗಾಗಿ ದಿನಸಿ ಕಿಟ್ ಗಳನ್ನು ಸಿದ್ಧಪಡಿಸಿದ ಸ್ವಯಂಸೇವಕರ ತಂಡ



ದಿನಸಿ ಕಿಟ್ ವಿತರಣೆ

## ಅನಂತ ಚಿತ್ರಸಂಪುಟ

( ಜುಲೈ ತಿಂಗಳ ನೆನಪಿನ ಹಲವು ಚಿತ್ರಗಳು )

ಸಂಕಲನ: ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ರವೀಂದ್ರನಾಥ ಠ್ಯಾಗೋರರ ಜನ್ಮದಿನದಂದು ಪಾರ್ಲಿಮೆಂಟ್ ಭವನದಲ್ಲಿ ಗುರುದೇವನಿಗೆ ಗೌರವಸಮರ್ಪಣೆ, ಶ್ರೀ ಎಲ್.ಕೆ. ಅದ್ವಾನಿ, ಶ್ರೀ ಬಾಬುಲ್ ಸುಪ್ರಿಯೋ ಮೊದಲಾದವರೊಡನೆ ಶ್ರೀ ಅನಂತಕುಮಾರ್ (ಮೇ ೨೦೧೭)




ಬೆಂಗಳೂರಿನಲ್ಲಿ ಸಿಪೆಟ್ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಶ್ರೀ ರಾಜನಾಥ ಸಿಂಗ್ ಮೊದಲಾದವರೊಡನೆ ಶ್ರೀ ಅನಂತಕುಮಾರ್ (ಜುಲೈ ೨೦೧೬)




ಕಾರ್ಗಿಲ್ ವಿಜಯೋತ್ಸವದ ವಾರ್ಷಿಕ ಸಂಭ್ರಮದಲ್ಲಿ ಶ್ರೀ ಅನಂತಕುಮಾರ್ (ಬೆಂಗಳೂರು, ಜುಲೈ ೨೦೧೪)



ಭಾರತೀಯ ಜನಸಂಘದ ಸಂಸ್ಥಾಪಕರಾದ ಶ್ರೀ ಶಾಮಪ್ರಸಾದ್ ಮುಖರ್ಜಿಯವರ ಜನ್ಮದಿನದಂದು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರೊಡನೆ ಶ್ರೀ ಅನಂತಕುಮಾರ್ (ಜುಲೈ ೩೦, ೨೦೦೧)



ಬೆಂಗಳೂರಿಗೆ ಸೇರ್ಪಡೆಗೊಂಡಿರುವ ೧೧೦ ಗ್ರಾಮಗಳಿಗೆ ನೀರು ಸರಬರಾಜು ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಪಾಲಿಕೆಯ ನಿಯೋಗದೊಡನೆ ಆಗಿನ ಕೇಂದ್ರ ನಗರಾಭಿವೃದ್ಧಿ ಸಚಿವರಾಗಿದ್ದ ಶ್ರೀ ವೆಂಕಯ್ಯ ನಾಯ್ಡು ರವರಿಗೆ ಮನವಿ ಸಲ್ಲಿಸುತ್ತಿರುವ ಶ್ರೀ ಅನಂತಕುಮಾರ್ ( ಜುಲೈ ೨೦೧೫)



ಆಫ್ಘಾನಿಸ್ತಾನದ ಸ್ಥಿತಿಗತಿಗಳನ್ನು ಕುರಿತಂತೆ ಅಮೆರಿಕನ್ ಕಾಂಗ್ರೆಸ್ ಏರ್ಪಡಿಸಿದ್ದ ಸಮ್ಮೇಳನದಲ್ಲಿ ಭಾರತದ ಪರವಾಗಿ ಭಾಗವಹಿಸಿದ್ದ ಶ್ರೀ ರಾಜನಾಥ ಸಿಂಗ್ ಹಾಗೂ ಶ್ರೀ ಅನಂತಕುಮಾರ್, ಅಮೆರಿಕಾದ ಕಾಂಗ್ರೆಸ್ ಪ್ರತಿನಿಧಿಗಳೊಡನೆ (ಅಮೆರಿಕಾ, ಜುಲೈ ೨೦೧೩)